ಅರಿವು ಭಾರತ

ಸಂಚಿಕೆ - 03

# ಅರಿವು ಯಾನ

ಆಗಸ್ಟ್ 2026

## ನಮ್ಮ ನಡೆ ಅಸ್ಪೃಶ್ಯತೆ ಮುಕ್ತ ಭಾರತದೆಡೆಗೆ





# ಪರಿವಿಡಿ


01 ಜಗದೊಳಗೆ ಲೇಸೆ ಹಬ್ಬುತಿರಲಿ: ಬೇಂದ್ರೆಯವರ ಪಾಸಿಟಿವ್ ಬದುಕಿನ ಸಂದೇಶ — ಡಾ. ಸಿ. ಎ. ರಮೇಶ್ — 03

02 ತಾರತಮ್ಯದಿಂದಾಗುವ ಮಾನಸಿಕ ಅಘಾತಗಳ ಹೊಣೆಗಾರಿಕೆ ಮೇಲ್ಜಾತಿಯವರದು — ಡಾ. ಶಿವಪ್ಪ ಅರಿವು — 04

03 ಕಲ್ಯಾಣದ ಅನುಭವ ಮಂಟಪ..... — ವಿವೇಕಾನಂದ ಎಚ್.ಕೆ. — 06

04 ಜಗದೀಶ್ವರ್ ಮನೆಯಲ್ಲಿ ಸಹಭೋಜನ ಗಿಡ ನೆಡುವಿಕೆ ಮೂಲಕ ಸಮಾನತೆಯ ಸಂದೇಶ — 09

05 ಕುಂಚೇನಹಳ್ಳಿ ಕಾರ್ಯಕ್ರಮದಲ್ಲಿ ಶಿವಮೊಗ್ಗ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನಿಖಿಲ್ ಬಿ. ಅವರ ಮಾತುಗಳು — 11

06 ಕುಂಚೇನಹಳ್ಳಿಯಲ್ಲಿ ನಡೆದ ಸಮಾನತಾ ಸಹಭೋಜನ ಕಾರ್ಯಕ್ರಮದಲ್ಲಿ ಬಿ. ಗೋಪಾಲ್ ಅವರ ಭಾಷಣ — 13

07 ಶಿವರಾಜ್ ಅವರ ಮನೆಯಲ್ಲಿ ಸಮಾನತೆಯ ಸಹಭೋಜನ — 15

08 ಆಲ್ದೂರು ಸರ್ಕಾರಿ ಶಾಲೆಯಲ್ಲಿ ಸಮಾನತಾ ಪ್ರತಿಜ್ಞೆ — 16

09 ಸುಬ್ಬಾರೆಡ್ಡಿ ಅವರಿಗೆ Doctarate ಬಂದ ಸಂದರ್ಭ ಅವರನ್ನು ಅರಿವು ಭಾರತ ತಂಡ ಸನ್ಮಾನ ಮಾಡಿದರು — 17

10 ಶೆಟ್ಟಿಕಲ್ಲು ಗ್ರಾಮದಲ್ಲಿ ಅಸ್ಪೃಶ್ಯತೆಗೆ ಅಂತ್ಯ: ಮುನೇಗೌಡರ ಮನೆಯಲ್ಲಿ ನಡೆದ ಸಮಾನತಾ ಸಹಭೋಜನ — 18

11 ಸಯ್ಯದ್ ಸದಾತುಲ್ಲಾ ಅವರ ಮನೆಯಲ್ಲಿ ಸಮಾನತೆಯ ಸಹಭೋಜನ — 23

12 'ಮುಂದೆ ನಡೆದವರು: ಕೋಲಾರ ಜಿಲ್ಲೆಯ ಮುಂಚೂಣಿಗರ ಪರಿಚಯ ಮತ್ತು ಪ್ರೇರಣೆ' ಕೃತಿ ಬಿಡುಗಡೆ — 24



# ಜಗದೊಳಗೆ ಲೇಸೆ ಹಬ್ಬುತಿರಲಿ:
## ಬೇಂದ್ರೆಯವರ ಪಾಸಿಟಿವ್ ಬದುಕಿನ ಸಂದೇಶ

ಮಾನವೀಕರಣ



ಡಾ. ಸಿ. ಎ. ರಮೇಶ್

"ಕೆಟ್ಟದ್ದನ್ನ ನೋಡಬೇಡ, ಕೇಳಬೇಡ, ಮಾತಾಡಬೇಡ" ಅಂತ ಗಾಂಧೀಜಿಯ 3 ಮಂಗಗಳ ಮೂಲಕ ನಾವೆಲ್ಲಾ ಕಲಿತಿದ್ದೀವಿ. ಆದರೆ ನಮ್ಮ ವರಕವಿ ಬೇಂದ್ರೆ, ಇದನ್ನೇ ಪಾಸಿಟಿವ್ ಆಗಿ ಬಹಳ ಚೆನ್ನಾಗಿ ಹೇಳಿದ್ದಾರೆ"

"ಲೇಸೆ ಕೇಳಿಸಲಿ ಕಿವಿಗೆ, ನಾಲಗೆಗೆ ಲೇಸೆ ನುಡಿದು ಬರಲಿ,

ಲೇಸೆ ಕಾಣಿಸಲಿ ಕಣ್ಗೆ, ಜಗದೊಳಗೆ ಲೇಸೆ ಹಬ್ಬುತಿರಲಿ..."

"'ಲೇಸು' ಅಂದ್ರೆ ಒಳ್ಳೆಯದು ಅಂತ! ನಮ್ಮ ಕಿವಿಗೆ ಬರೀ ಒಳ್ಳೆಯದೇ ಕೇಳಿಸಲಿ, ನಮ್ಮ ನಾಲಿಗೆಯಿಂದ ಬರೀ ಒಳ್ಳೆಯ ಮಾತುಗಳೇ ಬರಲಿ, ಕಣ್ಣಿಗೆ ಒಳ್ಳೆಯದೇ ಕಾಣಿಸಲಿ. ನೆಗೆಟಿವ್ ವಿಷಯಗಳನ್ನು ಬಿಟ್ಟು, ಬರೀ ಪಾಸಿಟಿವ್ ವಿಷಯಗಳನ್ನು ಮಾತ್ರ ನಾವು ಸ್ವೀಕರಿಸಿದರೆ... ಈ ಇಡೀ ಜಗತ್ತಿನ ತುಂಬಾ ಬರೀ 'ಒಳ್ಳೆಯದೇ' ಹಬ್ಬುತ್ತದೆ ಅನ್ನೋದು ಬೇಂದ್ರೆ ಅವರ ಆಶಯ!"

"ಇವತ್ತಿನ ಈ ನೆಗೆಟಿವ್ ಪ್ರಪಂಚದಲ್ಲಿ, ಟೆನ್ಷನ್ ತುಂಬಿರೋ ಬದುಕಲ್ಲಿ ನಮಗೆಲ್ಲರಿಗೂ ಈ 'ಲೇಸು' ಬೇಕೇಬೇಕು. ಜಗದೊಳಗೆ ಲೇಸನ್ನು ಹರಡಿ!

ನಿಮ್ಮ ದಿನವನ್ನು ಪಾಸಿಟಿವ್ ಆಗಿ ಪ್ರಾರಂಭಿಸಲು ಬೇಂದ್ರೆಯವರ ಈ ಸಾಲುಗಳು ಸ್ಫೂರ್ತಿ. 'ಲೇಸು' ಎಂದರೆ ಒಳಿತು. ಜಗದೊಳಗೆ ಲೇಸೆ ಹಬ್ಬುತಿರಲಿ.



ಡಾ. ಶಿವಪ್ಪ ಅರಿವು

# ತಾರತಮ್ಯದಿಂದಾಗುವ ಮಾನಸಿಕ ಅಘಾತಗಳ ಹೊಣೆಗಾರಿಕೆ ಮೇಲ್ಜಾತಿಯವರದು

ಜಾತಿಯ ತಾರತಮ್ಯದಿಂದ, ಅದರಲ್ಲೂ ಅಸ್ಪೃಶ್ಯರೆಂದು ಹೊರಗಿಡುವ ಕ್ರಿಯೆಯಿಂದ ಉಂಟಾಗುವ ಮಾನಸಿಕ ಅಘಾತ ಜೀವಮಾನದ ಗಾಯ. ಈ ತಾರತಮ್ಯವನ್ನು ಹೇಗೆ ಒಂದು ಸಂಪ್ರದಾಯವಾಗಿ ಇಂದಿಗೂ ಉಳಿಸಿಕೊಳ್ಳಲು ಸಾಧ್ಯವಾಗಿದೆ ಎಂಬುದೇ ವಿಷ್ಮಯ. ಪ್ರಜಾಪ್ರಭುತ್ವ ಹುಟ್ಟಿಕೊಂಡಿದೆ, ಸಮಾನ ಕಾನೂನುಗಳು ಜಾರಿಯಲ್ಲಿವೆ, ಮಾನವ ಹಕ್ಕುಗಳು ಪ್ರತಿಪಾದನೆಗೊಂಡಿವೆ, ಆಧುನಿಕ ಶಿಕ್ಷಣ ಎಲ್ಲರಿಗೂ ಸಿಗುತ್ತಿದೆ, ಭೂಮಿ ಆಚೆಗೂ ಅನ್ಯಗ್ರಹಗಳನ್ನು ಹುಡುಕುವ ಪ್ರಯಾಣ ಶುರುವಾಗಿದೆ. ಈ ಕಾಲಘಟ್ಟದಲ್ಲೂ ಜಾತಿಯ ಕಾರಣಕ್ಕೆ ಕೋಟ್ಯಾಂತರ ಜನರನ್ನು ಸಾರ್ವಜನಿಕ ದೇವಾಲಯ, ಮತ್ತು ಮೇಲ್ಜಾತಿಯವರ ಮನೆಗಳ ಒಳಗೆ ಬಾರದಂತೆ ಮಾನಸಿಕ ತಡೆಗೋಡೆಯನ್ನು ಇನ್ನೂ ಉಳಿಸಿಕೊಂಡಿರುವುದು ಎಷ್ಟು ಸರಿ?

ಸ್ವಂತವಾಗಿ ಆಲೋಚಿಸುವ ಮನುಸ್ಸೇ ಬೆಳೆಯದ ಹಾಗೆ ಈ ಜಾತಿ ವ್ಯವಸ್ಥೆ ಮಾಡಿಬಿಟ್ಟಿದೆ. ಸ್ವಂತವಾಗಿ ಯೋಚಿಸುವಾ ಮನಸ್ಸುಗಳು ಬೆಳೆದರೆ ಅಪ್ರಾಕೃತಿಕವಾಗಿರುವ ಜಾತಿಯನ್ನು, ಜಾತಿ ತಾರತಮ್ಯವನ್ನು ಒಪ್ಪಲು ಸಾಧ್ಯವಾಗದು. ಈ ನಿರ್ಬಂಧಗಳ ನಡುವೆಯೇ ಅಲ್ಲೊಬ್ಬ ಇಲ್ಲೊಬ್ಬ ಬುದ್ಧ, ಬಸವ, ಕನಕ, ಜ್ಯೋತಿಬಾ ಪೂಲೆ, ಗಾಂಧಿ, ಅಂಬೇಡ್ಕರ್, ಕುದ್ಮಲ್ ರಂಗರಾವ್, ಕುವೆಂಪು ಬೆಳೆಯುತ್ತಾರೆ. ಜಾತಿಯ ಅಂತಸ್ತುಗಳಿಂದ ಕೆಳಗಿಳಿದು ಸಹಜ ಮಾನವ ಪ್ರೀತಿಯನ್ನು ಪ್ರತಿಪಾದಿಸುತ್ತಾರೆ. ಆ ಆದರ್ಶಗಳ ತೋರ್ಬೆರಳು ಗಮನಿಸಿ ನಾವೆಲ್ಲ ಸಾಗಬೇಕು.

ಅಪರೂಪಕ್ಕೆ ಅಧ್ಯಯನ ದೃಷ್ಟಿಯಿಂದಲೋ, ಪ್ರವಾಸದ ಭಾಗವಾಗಿಯೊ ನಾನು ಮಂತ್ರಾಲಯ, ಉಡುಪಿ ಮೊದಲಾದ ಮಠಗಳಿಗೆ ಹೋಗಿ ಬಂದಿದ್ದೇನೆ. ತುಂಬಾ ಓದಿಕೊಂಡಿರುವ ಜನ ಅಲ್ಲಿದ್ದರೂ ಜಾತಿಯ ತಾರತಮ್ಯ ಗರಿಷ್ಠ ಮಟ್ಟದಲ್ಲಿದೆ. ಅನ್ಯ ಸಮುದಾಯದ ಜನ ಎಷ್ಟೇ ಗೌರವಾನ್ವಿತರಾಗಿದ್ದರೂ ಪಕ್ಕದಲ್ಲಿ ಕೂರಿಸಿಕೊಂಡು ತಿನ್ನವ ಮಾತು ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ಸಮಾನತೆಯಲ್ಲಿ ನಂಬಿಕೆ ಇಟ್ಟುಕೊಂಡು ಇಲ್ಲಿಗೆ ಬರುವವರು ಯಾಕಾದರೂ ಇಲ್ಲಿಗೆ

ಬಂದೆ ಎಂದು ಕೊರಗುವುದಂತು ಇದ್ದುದೆ. ಈ ಜಾಗಗಳು ಎಲ್ಲರನ್ನೂ ಒಪ್ಪುವ ಹಂತಕ್ಕೆ ಏರಿಲ್ಲ. ಈ ತಾರತಮ್ಯವನ್ನು ಸಮರ್ಥಿಸಿಕೊಳ್ಳುವ ಜನರೂ ಇದ್ದಾರೆ. ಜಾತಿ ತಾರತಮ್ಯ ಅಲ್ಲಿಂದ ಶುರುವಾಗಿ ಶೂದ್ರರೇ ತುಂಬಿರುವ ಹಳ್ಳಿಗಳ ದೇವಾಲಯ ಮತ್ತು ವಾಸದ ಮನೆಗಳವರೆಗೂ ವಿಸ್ತರಿಸಿದೆ. ಎಲ್ಲರೂ ನಾಲ್ಕು ಮೆಟ್ಟಿಲು ಇಳಿಯಬೇಕು. ಇಳಿದು ಸಮಾನತೆ, ಸಹಬಾಳ್ವೆ ತತ್ವಗಳನ್ನು ಗೆಲ್ಲಿಸಬೇಕು.

ಡಾ. ಬಿ. ಆರ್ ಅಂಬೇಡ್ಕರ್ ಅವರು ಆವರಣ, ಆವರಣದಾಚೆ ಎಂಬ ಪದಗಳನ್ನು ತಮ್ಮ ಬರಹದಲ್ಲಿ ಬಳಸಿದ್ದಾರೆ. ಮೊದಲು ಬ್ರಾಹ್ಮಣರು ತಮ್ಮ ಸಮುದಾಯಕ್ಕೆ ಒಂದು ಆವರಣ ಹಾಕಿಕೊಂಡರು, ಸಹಜವಾಗಿಯೇ ಉಳಿದವರು ಆವರಣದಾಚೆ ನಿಲ್ಲಬೇಕಾಯಿತು. ಈ ಆವರಣದ ಕತೆ ಅಲ್ಲಿಗೆ ನಿಲ್ಲಲಿಲ್ಲ. ಅನ್ಯ ಸಮುದಾಯಗಳು ಬ್ರಾಹ್ಮಣರ ಹಾದಿಯಲ್ಲಿಯೇ, ತಮ್ಮತಮ್ಮ ಜಾತಿಗಳಿಗೆ, ಉಪಜಾತಿಗಳಿಗೆ ಆವರಣಗಳನ್ನು ಹಾಕಿಕೊಂಡು, ಮದುವೆ, ಊಟ ಇತ್ಯಾದಿಗಳನ್ನು ಸೀಮಿತಗೊಳಿಸಿಕೊಂಡರು. ಅಲ್ಲಿಂದ ಶುರುವಾದ ''ನಮ್ಮವರು' ಅನ್ಯರು' ಪರಿಪಾಠ ಎಷ್ಟೇ ಶಿಕ್ಷಣ ದೊರೆತರೂ, ಕಾನೂನು ಬಂದರೂ ಕೊನೆಗಾಣಲಿಲ್ಲ. ಎಲ್ಲರನ್ನೂ ಒಂದುಗೂಡಿಸಲು ಮಾಡಿದ ಸಾಹಸಗಳನ್ನು ಜಾತಿಯ ಗಟ್ಟಿ ಮನಸ್ಸುಗಳು ಪ್ರಬಲವಾಗಿಯೇ ಹಿಮ್ಮೆಟ್ಟಿಸಿವೆ. ಬುದ್ಧನನ್ನು, ಬಸವನನ್ನೂ ಪ್ರತಿಭಟಿಸಿವೆ.

ಸ್ವತಂತ್ರ ಚಿಂತನೆಯನ್ನೇ ಕಿತ್ತುಕೊಂಡಿರುವ ಜಾತಿಯು ಈಗ ತನ್ನ ಗೋಡೆಗಳನ್ನು ಉಳಿಸಿಕೊಳ್ಳಲು ಹರಸಾಹಸ ಪಡುತ್ತಿರುವುದಂತ ನಿಜ. ಕಾಲೇಜು, ಕೆಲಸದ ಜಾಗಗಳಲ್ಲಿ ಸಿಗುವ ಸ್ವಾತಂತ್ರ್ಯ, ಹೆಣ್ಣು ಮಕ್ಕಳ ಕೊರತೆ, ವೈಚಾರಿಕ ಸಾಹಿತ್ಯದ ಓದು, ಸಿನೆಮಾ ಇತ್ಯಾದಿಗಳು ಪಾರಂಪರಿಕ ನಂಬಿಕೆಗಳನ್ನು ತಕ್ಕ ಮಟ್ಟಿಗೆ ಶೇಕ್ ಮಾಡಿವೆ. ಅಂತರ ಜಾತಿ ವಿವಾಹಗಳು ನಗರಗಳು ಮಾತ್ರವಲ್ಲ , ಹಳ್ಳಿಗಳಲ್ಲೂ ನಡೆಯುತ್ತಿವೆ. ಬ್ರಾಹ್ಮಣ ಮತ್ತು ದಲಿತರ ನಡುವೆಯೂ ಲೆಕ್ಕವಿಲ್ಲದಷ್ಟು ವಿವಾಹಗಳು ನಡೆದಿವೆ. ಲಿಂಗಾಯತ, ಒಕ್ಕಲಿಗ, ಕುರುಬ ಮೊದಲಾದ ಸುಮದಾಯಗಳಲ್ಲೂ ಅಂತರಜಾತಿ ವಿವಾಹಗಳಿಗೆ ನೇರ ಬೆಂಬಲವಿಲ್ಲದಿದ್ದರೂ ತಡೆಯಲು ಸಾಧ್ಯವಿಲ್ಲದೆ ಒಪ್ಪಿಗೆ ಸೂಚಿಸಿ ಗ್ರಾಂಡ್ ಆಗಿ ಮದುವೆ ಸಮಾರಂಭಗಳನ್ನು ಏರ್ಪಡಿಸಿರುವುದನ್ನು ನೋಡುತ್ತಿದ್ದೇವೆ. ಮರ್ಯಾದೆ ಹತ್ಯೆಗಳು ಕಡಿಮೆಯಾಗಿವೆ. ಇವೆಲ್ಲವೂ ಸಕಾರಾತ್ಮಕ ಬೆಳವಣಿಗೆಗಳು. ಆದರೂ ಅಸ್ಪೃಶ್ಯತೆ ದೊಡ್ಡ ಪ್ರಮಾಣದಲ್ಲಿ ಮುಂದುವರೆದಿದೆ.

ಬದಲಾವಣೆ ಜಗದ ನಿಯಮ ಎಂಬ ಮಾತಿದೆಯಲ್ಲ , ಅದು ಸುಮ್ಮನೆ ಹುಟ್ಟಿರುವುದಲ್ಲ. ಅನಿವಾರ್ಯತೆಗಳು ಸೃಷ್ಟಿಯಾದಾಗ ಕೆಲವು ಬದಲಾವಣೆಗಳು ನಡೆಯಲೇಬೇಕು. ಬಸ್ ಬಂದಾಗ ಪರಸ್ಪರ ಅಕ್ಕಪಕ್ಕ ಕೂರುವುದು ಅನಿವಾರ್ಯ. ಕೂರಲ್ಲವೆಂದರೆ ನಿಂತೇ ಸಾಗಬೇಕು. ಹಾಗೆಯೇ ಹಾಲಿನ ಡೈರಿ ಬಂದು ರೈತರು ಹಾಲು ಹಾಕಲು ಕ್ಯೂನಿಲ್ಲಬೇಕಾಯಿತು. ಊರಿನ ಗೌಡ ತಡವಾಗಿ ಬಂದರೆ, ಮೊದಲು ನಿಂತಿದ್ದ ಕೆಳಜಾತಿಯ ವ್ಯಕ್ತಿಯ ಹಿಂದೆಯೇ ನಿಲ್ಲಬೇಕಾಯಿತು. ಇಲ್ಲಿ ಜಾತಿಗಿಂತ ಸಮಯ ಮುಖ್ಯವಾಯಿತು. ಆದರೆ ಎಲ್ಲಾ ಕಡೆ ಅನಿವಾರ್ಯತೆ ಏರ್ಪಡದಿರಬಹುದು. ಅಲ್ಲಿ ಮಾನವೀಯ ಹೃದಯ ಮಿಡಿಯಬೇಕು. ಬ್ರಾಹ್ಮಣ, ಒಕ್ಕಲಿಗ, ಲಿಂಗಾಯತ ಮಠಗಳಲ್ಲಿ ಜಾತಿ ಮೀರಿದ ಮೌಲ್ಯ ಜಿನುಗಿದರೆ ಅದು ಮಾನವತೆಯನ್ನು ಗೆಲ್ಲಿಸುತ್ತದೆ. ಇಲ್ಲೂ ನಾಲ್ಕು ಮೆಟ್ಟಿಲು ಇಳಿಯುವ ಬುದ್ಧಿ ಅರಳಬೇಕು.

ನಿರಂತರವಾಗಿ ಯಾವುದೇ ವ್ಯಕ್ತಿ ಅಥವ ಜಾತಿಯನ್ನು ಅವಮಾನಿಸಿದರೆ ಪ್ರತಿಭಟನೆ ಸಹಜವಾಗಿಯೇ ಹುಟ್ಟುತ್ತದೆ. ಪ್ರತಿಭಟಿಸಲು ಶಕ್ತಿ ಇಲ್ಲದಿದ್ದರೆ ಒಳಗೊಳಗೆ ಮನಸ್ಸು ಕುದಿಯುತ್ತದೆ. ದಲಿತರು ಉದಾರಿಗಳಾಗಿರುವುದರಿಂದ ಮೇಲ್ಜಾತಿಗಳ ಮಹಾ ತಪ್ಪುಗಳನ್ನು ಉದಾರವಾಗಿ ಕ್ಷಮಿಸುತ್ತಾ ಬಂದಿದ್ದಾರೆ. ಮುಂದೆಯೂ ಹಾಗೆ ಕ್ಷಮಿಸುತ್ತಾ ಇರಬೇಕಾ ಅಥವಾ ಪ್ರತಿಭಟಿಸಿ ಜಾತಿವಾದಿಗಳನ್ನು ಬಗ್ಗಿಸಬೇಕಾ? ಅಸ್ಪೃಶ್ಯತೆಯಂತಹ ಮಾನಸಿಕ ಗಾಯಗಳನ್ನು ಅಷ್ಟು ಸುಲಭವಾಗಿ ಮರೆಯಲು ಸಾಧ್ಯವಿಲ್ಲ. ಅಸ್ಪೃಶ್ಯತೆಯನ್ನು ಪಾಲಿಸುವವರು ಈಗಲಾದರೂ ಎಚ್ಚರಗೊಂಡು ತಮ್ಮ ತಪ್ಪುಗಳಿಗೆ ಪಶ್ಚಾತಾಪ ಪಡಬೇಕು. ತಕ್ಷಣವೇ ತಿದ್ದುಕೊಳ್ಳಬೇಕು. ಸಾಮಾಜಿಕ ಘನತೆ ಎಲ್ಲ ಘನತೆಗಳಿಗಿಂತಲೂ ದೊಡ್ಡದು ಎಂದು ತಿಳಿಯಬೇಕು.

# ಕಲ್ಯಾಣದ ಅನುಭವ ಮಂಟಪ.....



ಎಚ್. ಕೆ. ವಿವೇಕಾನಂದ

**ಏನಿದು ಅನುಭವ ಮಂಟಪ.......**ಸಾಮಾಜಿಕ ರಾಜಕೀಯ ಶೈಕ್ಷಣಿಕ ಮತ್ತು ಸಾಮಾನ್ಯ ಜ್ಞಾನದ ಬಗ್ಗೆ ಆಸಕ್ತಿ ಇರುವ ಬಹುತೇಕ ಎಲ್ಲರಿಗೂ ಇದು ತಿಳಿದಿರುತ್ತದೆ. ಇದರ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲದ ಸಾಮಾನ್ಯ ಜನರಿಗಾಗಿ ಒಂದಷ್ಟು ಸರಳ ನಿರೂಪಣೆ.

ತಾಂತ್ರಿಕವಾಗಿ ಹೇಳುವುದಾದರೆ, 12 ನೇ ಶತಮಾನದಲ್ಲಿ ಬೀದರ್ ಜಿಲ್ಲೆಯ ಬಸವಕಲ್ಯಾಣದ ಬಳಿ ಸ್ಥಾಪಿತವಾದ ಒಂದು ಸಂಸ್ಥೆ.

ಅನುಭವದ ಆಧಾರದ ಮೇಲೆ ಮೂಡಿದ ಜ್ಞಾನವನ್ನು ಹಂಚಿಕೊಳ್ಳಲು ಚಿಂತಕರ ಚಾವಡಿಯ ಒಂದು ಪ್ರಜಾಸತ್ತಾತ್ಮಕ ಚರ್ಚಾ ಕೂಟ ಅಥವಾ ವೇದಿಕೆ ಎಂದು ಹೇಳಬಹುದು.

ಬಸವಣ್ಣನವರ ಆಶಯದಿಂದ ಮೂಡಿದ ಈ ಪರಿಕಲ್ಪನೆ ಅಲ್ಲಮರ ಮುಖ್ಯ ಪಾತ್ರದಲ್ಲಿ ಜನ್ಮ ತಳೆದ ಬಗ್ಗೆ ಮಾಹಿತಿ ಇದೆ. ವಚನ ಸಾಹಿತ್ಯ ವಚನ ಚಳವಳಿಯಾಗಿ ಸಮಾನತೆಯ ಸಾಮಾಜಿಕ ಕ್ರಾಂತಿಯಲ್ಲಿ ಮಹತ್ವದ ಪಾತ್ರ ಅನುಭವ ಮಂಟಪದ್ದು.

ಅಕ್ಕಮಹಾದೇವಿ, ಚನ್ನಬಸವಣ್ಣ , ಸೂಳೆ ಸಂಕವ್ವ ಸೇರಿ ಸಮಾಜದ ಎಲ್ಲಾ ಜಾತಿಗಳ ಎಲ್ಲಾ ವರ್ಗಗಳ ಜನರಿಗೂ ಸಮಾನವಾಗಿ ವೇದಿಕೆ ಕಲ್ಪಿಸಿದ ಕೀರ್ತಿ ಅನುಭವ ಮಂಟಪಕ್ಕೆ ಸಲ್ಲುತ್ತದೆ.

ಈಗಿನ ಕಾಲದಲ್ಲಿ ಬಹಳಷ್ಟು ಮಡಿವಂತಿಕೆಗೆ ಒಳಪಡುವ ಜನ ಮತ್ತು ವಿಷಯಗಳಲ್ಲಿಯೂ ಆಗಲೇ ಬಹಳಷ್ಟು ಉದಾರತೆ ಇದದ್ದು ಅನುಭವ ಮಂಟಪದ ಹೆಗ್ಗಳಿಕೆ ಮತ್ತು ಸ್ಪೂರ್ತಿದಾಯಕ.

## ವೇಶ್ಯೆಗೂ ಸ್ಥಾನ, ಅಸ್ಪೃಶ್ಯರಿಗೂ ಪ್ರವೇಶ

ವಿದುವೆಯೂ ಭಾಗವಹಿಸಬಹುದು ಎನ್ನುವ ಸನ್ನಿವೇಶವನ್ನು 12 ನೇ ಶತಮಾನದಲ್ಲಿ ಸೃಷ್ಟಿಸಿದ್ದರು ಎಂದರೆ ಅನುಭವ ಮಂಟಪದ ನಿಜವಾದ ಸಮಾನತೆ, ಮಾನವೀಯತೆ, ಪ್ರಜಾಸತ್ತಾತ್ಮಕತೆ, ಸೂಕ್ಷ್ಮತೆ ಅರ್ಥವಾಗುತ್ತದೆ.

→

21 ನೆಯ ಶತಮಾನದಲ್ಲಿಯು ಇನ್ನೂ ನನಸಾಗದ ಅಸಮಾನತೆಯ, ಭ್ರಷ್ಟ, ಜಾತಿ ಆಧಾರದ ಹೊಲಸು ರಾಜಕೀಯ ಮತ್ತು ಸಾಮಾಜಿಕ ಪರಿಸ್ಥಿತಿಯಲ್ಲಿ ನಾವಿದ್ದೇವೆ ಎಂಬುದೇ ನಾಚಿಕೆಗೇಡು.

ಅಲ್ಲಿನ ಚರ್ಚಾ ಗೋಷ್ಠಿಗಳ ಕಾರ್ಯಕಲಾಪದ ವಿವರಗಳನ್ನು ಅದರ ಬಗ್ಗೆ ಆಳವಾಗಿ ಅಧ್ಯಯನ ಮಾಡಿದರಿಂದ ಕೇಳಿ ತಿಳಿದುಕೊಂಡಾಗ ತುಂಬಾ ಸಂತೋಷ ಮತ್ತು ಆಶ್ಚರ್ಯವಾಯಿತು.

## ಎಲ್ಲರಿಗೂ ಇದ್ದ ಅಭಿವ್ಯಕ್ತಿ ಸ್ವಾತಂತ್ರ್ಯ

ಆಳವಾದ ಜ್ಞಾನ, ಪರಸ್ಪರ ಗೌರವಿಸುವಿಕೆ, ವಿಶಾಲ ಮನೋಭಾವ, ವೈಚಾರಿಕ ಪ್ರಜ್ಞೆ, ಸಂಯಮ, ವಿವೇಚನೆ ನಿಬ್ಬೆರಗಾಗಿಸುತ್ತದೆ.

ಬದುಕು ಈಗಿನಷ್ಟು ಸಂಕೀರ್ಣವಾಗಿರದೆ ಸರಳವಾಗಿದ್ದಾಗಲೂ ಅವರುಗಳಲ್ಲಿ ವೈಯಕ್ತಿಕ ಜೀವನ ಮತ್ತು ಸಾಮಾಜಿಕ ಜವಾಬ್ದಾರಿ, ಅಸಮತೋಲನದ ಬಗ್ಗೆ ಇದ್ದ ದೂರದೃಷ್ಟಿಯ ಚಿಂತನೆಗಳು ದಂಗುಬಡಿಸುತ್ತವೆ.

ಈಗಿನ ಸಂದರ್ಭದಲ್ಲಿ ಅನೇಕ ಆಡಳಿತ ಮಂಡಳಿಗಳು, ಇಲಾಖೆಗಳು, ಸಂಘ ಸಂಸ್ಥೆಗಳು, ಮಾಧ್ಯಮಗಳು, ಸಾಮಾಜಿಕ ಜಾಲತಾಣಗಳು ಸೇರಿ ಅನುಭವ ಮಂಟಪದ ರೀತಿಯ ಬಹಳಷ್ಟು ವ್ಯವಸ್ಥೆ ಇದೆ. ಆದರೆ ಚರ್ಚೆಗಳು, ಮಾತುಕತೆಗಳು, ವಿಚಾರ ವಿನಿಮಯ ಎಲ್ಲವೂ ವಿವೇಚನಾರಹಿತ, ಬಾಲಿಶ, ಆಕ್ರೋಶ, ಸ್ವಾರ್ಥ, ಅಪ್ರಬುದ್ದತೆಯನ್ನು ಮೀರಲು ಸಾಧ್ಯವಾಗಿಲ್ಲ.

ಸಹಿಷ್ಣುತೆ, ಸಹಕಾರ, ಪರಸ್ಪರ ಗೌರವಿಸುವಿಕೆ, ಸಹನೆ ತೀರಾ ಅಪರೂಪವಾಗಿದೆ. ಜೋರು ಧ್ವನಿ, ವಿಷಯದ ಬಗ್ಗೆ ಸರಿಯಾದ ತಿಳಿವಳಿಕೆ ಇಲ್ಲದಿದ್ದರೂ ಮಾತಿನಲ್ಲೇ ಗೆಲ್ಲುವ ಸಣ್ಣತನ, ಇನ್ನೊಬ್ಬರ ತಪ್ಪುಗಳನ್ನೇ ಎತ್ತಿ ತೋರಿಸಿ ತನ್ನ ತಪ್ಪುಗಳನ್ನು ಸಮರ್ಥಿಸಿಕೊಳ್ಳುವುದು, ಅಸಭ್ಯ ಮಾತಿನಿಂದ ನಿಂದಿಸುವುದು, ಪ್ರಚೋದಿಸುವುದು, ಗಲಭೆ ಮಾಡಿ ಮಜಾ ನೋಡುವುದು ಒಂದೇ ಎರಡೇ......

ಅರ್ಥಪೂರ್ಣ ಚರ್ಚೆಯ ಮುಖಾಂತರ ಸತ್ಯದ ಹುಡುಕಾಟದ, ಬದುಕಿನ ಘನತೆಯನ್ನು ಹೆಚ್ಚಿಸುವ, ನೆಮ್ಮದಿಯ ಜೀವನ ವಿಧಾನದ ಮಾರ್ಗಗಳನ್ನು ಕಂಡುಹಿಡಿಯುವ, ಆ ಮೂಲಕ ಶಾಂತಿಯುತ ಸಮಾಜ ನಿರ್ಮಾಣ ಮಾಡುವ ಕನಸಿನ ಅನುಭವ ಮಂಟಪ ವಿಶ್ವಕ್ಕೇ ಒಂದು ಆದರ್ಶ ಮಾದರಿಯ ಪರಿಕಲ್ಪನೆ.ಕೇವಲ ಪ್ರದರ್ಶನದ ಗೊಂಬೆಯ ಸ್ತಬ್ಧ ಚಿತ್ರವಲ್ಲ.

ಮಾನವೀಯ ಮೌಲ್ಯಗಳನ್ನು, ಪ್ರಕೃತಿ ಪ್ರಾಣಿ ಪರಿಸರಗಳನ್ನು, ಚಿತ್ರ ಶಿಲ್ಪ ಕಲೆಗಳನ್ನು, ಇತಿಹಾಸದ ಮಹಾನ್ ಸಾಧಕರನ್ನು ಸ್ತಬ್ಧ ಚಿತ್ರಗಳ ಪ್ರದರ್ಶನವಾಗಿಸಿ ಅದೊಂದು ಮನರಂಜನೆ ಎಂದು ಭಾವಿಸಿ ಸೆಲ್ಫಿ ತೆಗೆದುಕೊಳ್ಳುವ ಕೃತಕ ಮನಸ್ಥಿತಿಗೆ ನಾವು ತಲುಪಿದ್ದೇವೆ.

## ವಾಸ್ತವವಾಗಿ ಹೇಳಬೇಕೆಂದರೆ

ಆಗ ಕೇವಲ ಒಂದು ಅನುಭವ ಮಂಟಪ ಒಂದು ನಾಡಿನ ಸಾಮಾಜಿಕ ವ್ಯವಸ್ಥೆಯನ್ನೇ ಬದಲಾಯಿಸುವ ಶಕ್ತಿ ಸಾಮರ್ಥ್ಯ ಹೊಂದಿತ್ತು. ಈಗ ಪ್ರಜಾಪ್ರಭುತ್ವದ ಅಡಿಯಲ್ಲಿ ಅಂತಹ ಹಲವಾರು ಮಂಟಪಗಳು ಇದ್ದರೂ ವ್ಯವಸ್ಥೆ ದಿನೇ ದಿನೇ ಹದಗೆಡುತ್ತಿರುವುದು ಅತ್ಯಂತ ಶೋಚನೀಯ.

## ಕಾಲ ಸರಿಯುವ ಮುನ್ನ

ನಮ್ಮ ನಿಯಂತ್ರಣ ದಾಟುವ ಮುನ್ನ ಎಚ್ಚೆತ್ತುಕೊಳ್ಳೋಣ.....

ಸಾಮಾಜಿಕ ಜಾಲತಾಣಗಳು ಸೇರಿ ಎಲ್ಲಾ ಸಂಘಟನೆಗಳಿಗೂ ಅನುಭವ ಮಂಟಪ ಒಂದು ಮಾದರಿಯಾಗಲಿ ಎಂದು ಆಶಿಸುತ್ತಾ......

*ವಿವೇಕಾನಂದ. ಹೆಚ್.ಕೆ.*
*9844013068*

ಅರಿವು ಭಾರತ

# ಇತ್ತೀಚಿನ ಕಾರ್ಯಕ್ರಮಗಳು

# ಜಗದೀಶ್ವರ್ ಮನೆಯಲ್ಲಿ ಸಹಭೋಜನ
## ಗಿಡ ನೆಡುವಿಕೆ ಮೂಲಕ ಸಮಾನತೆಯ ಸಂದೇಶ

28 ಜುಲೈ, 2026 | ಶಿವಮೊಗ್ಗ ಜಿಲ್ಲೆಯ ಕುಂಚೇನಹಳ್ಳಿ




ಶಿವಮೊಗ್ಗ ಜಿಲ್ಲೆಯ ಕುಂಚೇನಹಳ್ಳಿ ಗ್ರಾಮದಲ್ಲಿ ಜಗದೀಶ್ವರ್ ಅವರ ಮನೆಯಲ್ಲಿ ಸಮಾನತೆಗಾಗಿ ಸಹಭೋಜನ, ಗಿಡ ನೆಡುವಿಕೆ ಹಾಗೂ ಪ್ರತಿಜ್ಞಾ ಸ್ವೀಕಾರ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ಜಿಲ್ಲಾ ಎಸ್‌ಪಿ ನಿಖಿಲ್ ಬಿ., ಮಲೆನಾಡು ಅಭಿವೃದ್ಧಿ ಮಂಡಳಿ ಅಧ್ಯಕ್ಷ ಮಂಜುನಾಥ್ ಗೌಡ, ಬಿ. ಗೋಪಾಲ್, ಎಚ್.ಕೆ. ವಿವೇಕಾನಂದ, ಪಂಡಿತ್ ಮುನಿವೆಂಕಟಪ್ಪ, ಡಾ. ರುದ್ರೇಶ್, ಡಾ. ಹರೀಶ್ ಬಾನುಗೊಂಡಿ ಸೇರಿದಂತೆ ಗಣ್ಯರು ಭಾಗವಹಿಸಿದರು.




*ಅರಿವು ಭಾರತದ ಸಮಾನತಾ ಚಳವಳಿಗೆ ಕೋಲಾರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿದ್ದಾಗ ನೀಡಿದ ಅಮೂಲ್ಯ ಸಹಕಾರವನ್ನು ಸ್ಮರಿಸಿ, ಶಿವಮೊಗ್ಗದಲ್ಲಿ ನಿಖಿಲ್ ಬಿ. ಅವರನ್ನು ಸನ್ಮಾನಿಸಲಾಯಿತು.*


ಅರಿವು ಭಾರತ
ನಮ್ಮ ನಡೆ ಅಸ್ಪೃಶ್ಯತೆ ಮುಕ್ತ ಭಾರತದೆಡೆಗೆ
ಶಿವಮೊಗ್ಗ ತಾಲ್ಲೂಕಿನ ಕುಂಚೇನಹಳ್ಳಿ
ಸಮಾನತೆಗಾಗಿ ಸಹಭೋಜನ
















## ಕುಂಚೇನಹಳ್ಳಿ ಕಾರ್ಯಕ್ರಮದಲ್ಲಿ ಶಿವಮೊಗ್ಗ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನಿಖಿಲ್ ಬಿ. ಅವರ ಮಾತುಗಳು

ಈ ಕಾರ್ಯಕ್ರಮ ನನಗೆ ವೈಯಕ್ತಿಕವಾಗಿಯೂ ಅತ್ಯಂತ ಹತ್ತಿರವಾದದ್ದು. ಕೋಲಾರದಲ್ಲಿ ಈ ಚಳವಳಿಯ ಕಿರು ಪರಿಚಯವಾದ ದಿನವೇ, "ನಾನು ಈ ಸಂಸ್ಥೆಯ ಒಬ್ಬ ಸೈನಿಕನಾಗಿ ಕೆಲಸ ಮಾಡುತ್ತೇನೆ" ಎಂದು ಹೇಳಿದ್ದೆ. ಏಕೆಂದರೆ, ನಾನು ಬೆಳೆದದ್ದು ಒಂದು ಪಟ್ಟಣದಲ್ಲಿ. ಅಲ್ಲಿ ಜಾತಿ ಎನ್ನುವ ಭಾವನೆ ನಮಗೆ ಅಷ್ಟಾಗಿ ಗೊತ್ತಿರಲಿಲ್ಲ. ಅಕ್ಕಪಕ್ಕದವರು ಯಾವ ಜಾತಿಯವರು ಎನ್ನುವುದನ್ನೇ ತಿಳಿಯುವ ಅಗತ್ಯವೂ ಇರಲಿಲ್ಲ. ಶಾಲೆಯಲ್ಲಿಯೂ ನಮ್ಮ ಸ್ನೇಹಿತರು ಯಾರು, ಯಾವ ಸಮುದಾಯದವರು ಎಂಬ ಪ್ರಶ್ನೆ ಎಂದಿಗೂ ಉದ್ಭವಿಸಲಿಲ್ಲ. ಆ ಅರಿವೇ ನಮಗಿರಲಿಲ್ಲ.

ಆದರೆ, ಪೊಲೀಸ್ ಇಲಾಖೆಗೆ ಸೇರಿದ ನಂತರ ಸರ್ಕಾರ ನನಗೆ ರಾಜ್ಯದ ಎಂಟು ಜಿಲ್ಲೆಗಳಲ್ಲಿ ಸೇವೆ ಸಲ್ಲಿಸುವ ಅವಕಾಶ ನೀಡಿತು. ಆ ಜಿಲ್ಲೆಗಳಲ್ಲಿ ಕೆಲಸ ಮಾಡಿದಾಗ ಸಮಾಜದಲ್ಲಿ ಇನ್ನೂ ಜಾತಿ ಆಧಾರಿತ ಅಸಮಾನತೆ ಜೀವಂತವಾಗಿರುವ ವಾಸ್ತವಿಕತೆ ಕಣ್ಣೆದುರಿಗೆ ಬಂತು. ಆಗ ಪ್ರಶ್ನೆ ಮೂಡಿತು—ಇದನ್ನು ಕೇವಲ ಕಾನೂನಿನ ಮೂಲಕ ಸರಿಪಡಿಸಬಹುದೇ? ಅಥವಾ ಸಮಾಜಮುಖಿ ಕಾರ್ಯಕ್ರಮಗಳ ಮೂಲಕವೂ ಬದಲಾವಣೆ ತರಬಹುದೇ?

ನಾವು ಕಾನೂನಿನ ಚೌಕಟ್ಟಿನೊಳಗೆ ಮಾತ್ರ ಕಾರ್ಯನಿರ್ವಹಿಸಬಹುದು. ಅದರಾಚೆಗೆ ಹೋಗಲು ಸಾಧ್ಯವಿಲ್ಲ. ಆದರೆ, ವರದಿಗಳು ಮತ್ತು ಕಾನೂನು ಕ್ರಮಗಳ ಹೊರತಾಗಿ ಸಮಾಜದಲ್ಲಿ ಬದಲಾವಣೆ ತರಲು ಏನು ಮಾಡಬಹುದು ಎಂದು ಯೋಚಿಸಿದಾಗ, ಅರಿವು ಭಾರತ ತಂಡದೊಂದಿಗೆ ಸಂವಾದ ಆರಂಭವಾಯಿತು. ಅಲ್ಲಿಂದಲೇ ನಮ್ಮ ಬೆಸುಗೆ ಗಟ್ಟಿಯಾಯಿತು.

ಈ ಕಾರ್ಯಕ್ರಮ ಏಕೆ ಎಲ್ಲರಿಗೂ ಮುಖ್ಯ ಎಂಬುದಕ್ಕೆ ಒಂದು ವೈಯಕ್ತಿಕ ನೆನಪಿದೆ. ನನ್ನ ತಂದೆ ಹಳ್ಳಿಯಲ್ಲಿ ಬೆಳೆದವರು. ಅವರು ಹೇಳುತ್ತಿದ್ದ ಕಥೆಗಳಲ್ಲಿ , ಊರಿನ ಗೌಡರ ಮನೆಯ ಹೊರಗೇ ನಿಂತು ಮಾತನಾಡುವುದು ಸಹಜವಾಗಿತ್ತಂತೆ. ನನ್ನ ತಾತ ವೈದ್ಯರಾಗಿದ್ದರೂ ಮನೆಯೊಳಗೆ ಹೋಗುತ್ತಿರಲಿಲ್ಲ. ಆಗ ಅದರ ಅರ್ಥ ನಮಗೆ ತಿಳಿದಿರಲಿಲ್ಲ. ಆದರೆ ಇಂದು ಅದರ ಸಾಮಾಜಿಕ ಹಿನ್ನೆಲೆ ಅರ್ಥವಾಗುತ್ತದೆ. ನಮ್ಮ ಊರಾದ ದಾವಣಗೆರೆ ತಾಲ್ಲೂಕಿನ ಆಲೂರಿನಲ್ಲಿ ಈಗ ಅಂತಹ ಪರಿಸ್ಥಿತಿ ಇಲ್ಲ. ಸಮಾಜ ಬದಲಾಗಿದೆ. ಆದರೆ, ಕೋಲಾರ ಸೇರಿದಂತೆ ಹಲವು ಕಡೆಗಳಲ್ಲಿ ಇಂತಹ ಅನುಭವಗಳು ಇನ್ನೂ ಇವೆ ಎಂಬುದನ್ನು ನಾನು ಸ್ವತಃ ಕಂಡಿದ್ದೇನೆ.

ಈ ಅಂತರವನ್ನು ನಿವಾರಿಸಲು ಅತ್ಯಂತ ಸರಳವಾದ ಮಾರ್ಗವೆಂದರೆ ಒಟ್ಟಿಗೆ ಕೂತು ಊಟ ಮಾಡುವುದು. ಸಹಭೋಜನವು ಕೇವಲ ಊಟವಲ್ಲ ; ಅದು ಭ್ರಾತೃತ್ವವನ್ನು ಬೆಳೆಸುವ ಸಾಧನ. ಒಟ್ಟಿಗೆ ಕುಳಿತು ಊಟ ಮಾಡಿದಾಗ, ಪರಸ್ಪರರ ಬಗ್ಗೆ ಇರುವ ಗೋಡೆಗಳು ಸಹಜವಾಗಿಯೇ ಕರಗುತ್ತವೆ.

ಬಹಳ ಮಂದಿ ನಮ್ಮನ್ನು ಕೇಳುತ್ತಾರೆ— "ಪೊಲೀಸ್ ಇಲಾಖೆಯಲ್ಲಿ ನಿಮ್ಮ ನಡುವೆ ಇಷ್ಟೊಂದು ಒಗ್ಗಟ್ಟು ಹೇಗೆ?" ಅದರ ಉತ್ತರ ಸರಳ. ನಾವು ಆಗಾಗ ಒಟ್ಟಿಗೆ ಊಟ ಮಾಡುತ್ತೇವೆ. ತಿಂಗಳಿಗೆ ಕನಿಷ್ಠ ಒಂದು ಬಾರಿ ಎಲ್ಲರೂ ಸೇರಿ ಊಟ ಮಾಡುವ ಸಂಪ್ರದಾಯವಿದೆ. ಅದರಿಂದ ಪರಸ್ಪರ ವಿಶ್ವಾಸ ಮತ್ತು ಭ್ರಾತೃತ್ವ ಸಹಜವಾಗಿ ಬೆಳೆಯುತ್ತದೆ. ಇದೇ ತತ್ವವನ್ನು ಈ ಕಾರ್ಯಕ್ರಮ ಸಮಾಜದ ಮಟ್ಟದಲ್ಲೂ ಅನುಸರಿಸುತ್ತಿದೆ.

ನಾವು ಮನೆ ಕಟ್ಟಿಸುವಾಗ ಕಾರ್ಮಿಕನ ಜಾತಿ ಕೇಳುವುದಿಲ್ಲ. ವೈದ್ಯರ ಬಳಿ ಹೋಗುವಾಗ, ನರ್ಸ್ →

ಚಿಕಿತ್ಸೆ ನೀಡುವಾಗ ಅವರ ಜಾತಿಯನ್ನು ವಿಚಾರಿಸುವುದಿಲ್ಲ. ಆದರೆ ಸಮಾಜದ ಕೆಲವು ಸಂದರ್ಭಗಳಲ್ಲಿ ಮಾತ್ರ ಜಾತಿಯ ಗೋಡೆಗಳನ್ನು ಕಟ್ಟಿಕೊಳ್ಳುವುದು ನಮ್ಮದೇ ನಿರ್ಮಿತವಾದ ಕೃತಕ ಅಡೆತಡೆ. ಇವುಗಳನ್ನು ನಾವು ಪ್ರಾಮಾಣಿಕವಾಗಿ ಪ್ರಶ್ನಿಸಬೇಕಾಗಿದೆ.

ಪಂಪರು ಬಹಳ ಹಿಂದೆಯೇ "ಮಾನವ ಕುಲ ತಾನೊಂದೇ ವಲಂ" ಎಂದು ಹೇಳಿದ್ದಾರೆ. ಬಸವಣ್ಣನವರು "ಇವನಾರವ, ಇವನಾರವ" ಎಂದು ಕೇಳಬೇಡಿ; "ಇವ ನಮ್ಮವ" ಎಂದು ಕೇಳಿ ಎಂದು ಬೋಧಿಸಿದ್ದಾರೆ. ಶಿವಮೊಗ್ಗದ ಹೆಮ್ಮೆಯ ಕುವೆಂಪು ಅವರು ವಿಶ್ವಮಾನವ ಎಂಬ ಮಹತ್ತರ ಪರಿಕಲ್ಪನೆಯನ್ನು ನಮ್ಮ ಮುಂದೆ ಇಟ್ಟಿದ್ದಾರೆ. ನಮ್ಮ ನಾಡಿನ ಈ ಮಹನೀಯರ ಸಂದೇಶ ಒಂದೇ—ಮಾನವೀಯತೆಯೇ ಶ್ರೇಷ್ಠ.

ಆದರೆ, ಇಂದಿಗೂ ಗ್ರಾಮಗಳಲ್ಲಿ ಇಂತಹ ಕಾರ್ಯಕ್ರಮಗಳನ್ನು ಆರಂಭಿಸಲು ಮೊದಲ ಪ್ರಯತ್ನದಲ್ಲೇ ಒಪ್ಪಿಗೆ ಸಿಗುವುದು ಅಪರೂಪ. "ಮನೆಯವರು ಒಪ್ಪುವುದಿಲ್ಲ", "ಹಿರಿಯರು ಒಪ್ಪುವುದಿಲ್ಲ", "ನಮ್ಮ ಸಂಪ್ರದಾಯ ಬೇರೆ" ಎಂಬ ಕಾರಣಗಳು ಕೇಳಿಬರುತ್ತವೆ. ಈ ಸಮಸ್ಯೆ ಇಲ್ಲ ಎಂದು ನಿರಾಕರಿಸಿದರೆ ಪರಿಹಾರ ಹುಡುಕಲು ಸಾಧ್ಯವಿಲ್ಲ. ಮೊದಲು ಸಮಸ್ಯೆಯನ್ನು ಒಪ್ಪಿಕೊಳ್ಳಬೇಕು; ನಂತರ ಅದನ್ನು ಸರಿಪಡಿಸುವ ದಾರಿಯನ್ನು ಕಂಡುಕೊಳ್ಳಬೇಕು.

ಇಂದು ಎಲ್ಲರೂ ಜಗದೀಶ್ ಗೌಡರ ಬಗ್ಗೆ ಮಾತನಾಡುತ್ತಿದ್ದಾರೆ. ಆದರೆ ನಾನು ಅವರ ಕುಟುಂಬದ ಬಗ್ಗೆ ವಿಶೇಷವಾಗಿ ಹೇಳಲು ಬಯಸುತ್ತೇನೆ. ಇಂತಹ ಕಾರ್ಯಕ್ರಮಗಳನ್ನು ಆಯೋಜಿಸುವುದು ಒಬ್ಬ ವ್ಯಕ್ತಿಯ ನಿರ್ಧಾರ ಮಾತ್ರವಲ್ಲ; ಅದರ ಹಿಂದೆ ಮನೆಯವರ ಸಹಕಾರವೂ ಅತ್ಯಗತ್ಯ. ನಾಳೆ ಸಮಾಜದಲ್ಲಿ ಪ್ರಶ್ನೆಗಳು ಬಂದರೂ ಅದನ್ನು ಧೈರ್ಯವಾಗಿ ಎದುರಿಸುವ ಶಕ್ತಿ ಅವರ ಕುಟುಂಬ ತೋರಿದೆ. ಅದಕ್ಕಾಗಿ ಅವರಿಗೂ ನನ್ನ ಅಭಿನಂದನೆಗಳು ಸಲ್ಲುತ್ತವೆ.

ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡುವ ನಮಗೆ ಸಮಾಜದ ಪ್ರತಿಯೊಂದು ಸಮಸ್ಯೆಯೂ ಕಾಣುತ್ತದೆ. ನಮ್ಮ ಹಂತದಲ್ಲಿ ಸಾಧ್ಯವಾದಷ್ಟು ಪರಿಹಾರ ಹುಡುಕುವ ಪ್ರಯತ್ನ ಮಾಡುತ್ತೇವೆ. ಅದೇ ಉದ್ದೇಶದಿಂದ ಈ ರೀತಿಯ ಕಾರ್ಯಕ್ರಮಗಳಿಗೆ ನಮ್ಮ ಬೆಂಬಲವಿದೆ.

ಇದು ಕೇವಲ ಒಂದು ಮನೆಯ ಕಾರ್ಯಕ್ರಮವಾಗಿ ಉಳಿಯಬಾರದು. ಇಂದು ಜಗದೀಶ್ ಗೌಡರ ಮನೆಯಲ್ಲಿ ನಡೆದಿದ್ದರೆ, ನಾಳೆ ಮತ್ತೊಂದು ಮನೆಯಲ್ಲಿ ನಡೆಯಬೇಕು. ಮತ್ತೊಂದು ಗ್ರಾಮ, ಮತ್ತೊಂದು ತಾಲ್ಲೂಕು, ಮತ್ತೊಂದು ಜಿಲ್ಲೆಯಲ್ಲಿ ಸ್ವಯಂಪ್ರೇರಿತವಾಗಿ ಈ ಚಳವಳಿ ವಿಸ್ತರಿಸಬೇಕು. ನಮ್ಮನ್ನು ಕರೆದು ಕೇಳುವ ಪರಿಸ್ಥಿತಿಗಿಂತ, "ನಮ್ಮ ಮನೆಗೂ ಬನ್ನಿ" ಎಂದು ಜನರೇ ಆಹ್ವಾನಿಸುವ ದಿನ ಬಂದಾಗ ಈ ಪ್ರಯತ್ನದ ನಿಜವಾದ ಯಶಸ್ಸು ದೊರೆಯುತ್ತದೆ.

ಈ ಗೌರವಯುತ ಆಹ್ವಾನಕ್ಕಾಗಿ ಅರಿವು ಭಾರತ, ಕುಂಚೇನಹಳ್ಳಿ ಗ್ರಾಮದ ಎಲ್ಲಾ ಗ್ರಾಮಸ್ಥರು ಹಾಗೂ ಈ ಕಾರ್ಯಕ್ರಮದ ಯಶಸ್ಸಿಗೆ ಕೈಜೋಡಿಸಿದ ಪ್ರತಿಯೊಬ್ಬರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು. ನಿಮ್ಮೆಲ್ಲರಿಗೂ ಜಿಲ್ಲಾ ಪೊಲೀಸ್ ಇಲಾಖೆಯ ಪರವಾಗಿಯೂ ಅಭಿನಂದನೆಗಳು ಮತ್ತು ಶುಭಾಶಯಗಳು.

ಜೈ ಹಿಂದ್! ಜೈ ಕರ್ನಾಟಕ ಮಾತೆ!




## ಕುಂಚೇನಹಳ್ಳಿಯಲ್ಲಿ ನಡೆದ ಸಮಾನತಾ ಸಹಭೋಜನ ಕಾರ್ಯಕ್ರಮದಲ್ಲಿ ಬಿ. ಗೋಪಾಲ್ ಅವರ ಪ್ರೇರಣಾದಾಯಕ ಭಾಷಣ

ಅಸ್ಪೃಶ್ಯತೆ ಎಂಬ ಸಾಮಾಜಿಕ ಪಿಡುಗಿನ ವಿರುದ್ಧದ ಹೋರಾಟ ಇಂದಿನದ್ದಲ್ಲ. ಅದರ ವಿರುದ್ಧ ವ್ಯವಸ್ಥಿತವಾಗಿ ಧ್ವನಿ ಎತ್ತಿದ ಮಹಾನ್ ಸಮಾಜ ಸುಧಾರಕರಲ್ಲಿ ಛತ್ರಪತಿ ಸಾಹು ಮಹಾರಾಜರು ಪ್ರಮುಖರು.

1894ರಲ್ಲಿ ಅವರು ಕೊಲ್ಲಾಪುರ ಸಂಸ್ಥಾನದ ರಾಜರಾಗಿ ಅಧಿಕಾರ ಸ್ವೀಕರಿಸಿದ ಬಳಿಕ, ಅರಮನೆಯ ಆಡಳಿತ ವ್ಯವಸ್ಥೆಯನ್ನು ಪರಿಶೀಲಿಸಿದರು. ಆಗ ಅರಮನೆಯ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದವರಲ್ಲಿ ಶೇ.99.9ರಷ್ಟು ಮಂದಿ ಬ್ರಾಹ್ಮಣ ಸಮುದಾಯದವರೇ ಇದ್ದರು. ಶೂದ್ರ ಸಮುದಾಯದವರಷ್ಟೇ ಅಲ್ಲ, ಮಹಾರಾಜರ ಸ್ವಂತ ಕುರ್ಮಿ ಸಮುದಾಯದವರಿಗೂ ಯಾವುದೇ ಆಡಳಿತಾತ್ಮಕ ಅವಕಾಶ ಇರಲಿಲ್ಲ.

ಈ ಅಸಮಾನತೆಯನ್ನು ಗಮನಿಸಿದ ಸಾಹು ಮಹಾರಾಜರು ಬ್ರಿಟಿಷ್ ಆಡಳಿತದ ಅಧಿಕಾರಿಗಳೊಂದಿಗೆ ಚರ್ಚಿಸಿದರು. ಆಗ ಸಮಾಜದಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ವ್ಯವಸ್ಥೆಯನ್ನು ಜಾರಿಗೆ ತರಬೇಕು ಎಂಬ ಸಲಹೆ ದೊರೆಯಿತು. ಅದರಂತೆ, 1902ರ ಜುಲೈ 26ರಂದು ತಮ್ಮ ಜನ್ಮದಿನದಂದು ಶೇ.50ರಷ್ಟು ಮೀಸಲಾತಿಯನ್ನು ಜಾರಿಗೊಳಿಸುವ ಐತಿಹಾಸಿಕ ರಾಜಾಜ್ಞೆಯನ್ನು ಹೊರಡಿಸಿದರು. ಆದ್ದರಿಂದಲೇ ಅವರನ್ನು ಭಾರತದಲ್ಲಿ ಮೀಸಲಾತಿಯ ಜನಕ ಎಂದು ಗೌರವಿಸಲಾಗುತ್ತದೆ.

ಆದರೆ ಅವರು ಕೇವಲ ಮೀಸಲಾತಿಯನ್ನು ಜಾರಿಗೆ ತಂದು ನಿಲ್ಲಲಿಲ್ಲ. ಅಸ್ಪೃಶ್ಯತೆಯನ್ನು ಸಾಮಾಜಿಕವಾಗಿ ನಿರ್ಮೂಲನೆ ಮಾಡುವ ನಿಟ್ಟಿನಲ್ಲಿ ಒಂದು ವಿಶಿಷ್ಟ ಪ್ರಯೋಗವನ್ನೂ ನಡೆಸಿದರು. ಗಂಗಾರಾಮ ಕಾಂಬಳೆ ಎಂಬ ಮಹರ್ ಸಮುದಾಯದ ವ್ಯಕ್ತಿಗೆ ಆರ್ಥಿಕ ನೆರವು ನೀಡಿ ಹೋಟೆಲ್ ಆರಂಭಿಸಲು ಪ್ರೋತ್ಸಾಹಿಸಿದರು. ಆ ಹೋಟೆಲ್ ಉದ್ಘಾಟನೆಗೆ ಅರಮನೆಯ ಎಲ್ಲ ಅಧಿಕಾರಿಗಳು ಕಡ್ಡಾಯವಾಗಿ ಹಾಜರಾಗಬೇಕು ಎಂದು ಆದೇಶಿಸಿದರು.

ಉದ್ಘಾಟನೆಯ ಬಳಿಕ ಗಂಗಾರಾಮ ಕಾಂಬಳೆ ತಯಾರಿಸಿದ ಆಹಾರವನ್ನು ಎಲ್ಲರಿಗೂ ಬಡಿಸಲಾಯಿತು. ಆಗ ಕೆಲ ಅಧಿಕಾರಿಗಳು, "ಅಸ್ಪೃಶ್ಯರು ತಯಾರಿಸಿದ ಆಹಾರವನ್ನು ನಾವು ಸೇವಿಸುವುದಿಲ್ಲ; ಅದು ನಮ್ಮ ಸಂಪ್ರದಾಯಕ್ಕೆ ವಿರುದ್ಧ" ಎಂದು ವಿರೋಧ ವ್ಯಕ್ತಪಡಿಸಿದರು. ಆಗ ಸಾಹು ಮಹಾರಾಜರು ಸ್ಪಷ್ಟವಾಗಿ, "ಇಂದು ಈ ಆಹಾರವನ್ನು ಸೇವಿಸದವರು ನಾಳೆಯಿಂದ ಅರಮನೆಯ ಸೇವೆಯಲ್ಲಿ ಇರುವುದಿಲ್ಲ" ಎಂದು ಘೋಷಿಸಿದರು. ಉದ್ಯೋಗ ಕಳೆದುಕೊಳ್ಳಲು ಯಾರೂ ಸಿದ್ಧರಿರಲಿಲ್ಲ. ಅಂತಿಮವಾಗಿ ಎಲ್ಲರೂ ಒಂದೇ ಸಾಲಿನಲ್ಲಿ ಕುಳಿತು ಅದೇ ಆಹಾರವನ್ನು ಸೇವಿಸಿದರು. ಅಸ್ಪೃಶ್ಯತೆಯ ವಿರುದ್ಧ ಸಾಮಾಜಿಕ ಪರಿವರ್ತನೆ ತರಲು ಅವರು ಅನುಸರಿಸಿದ ಈ ತಂತ್ರಗಾರಿಕೆ ಇಂದಿಗೂ ಮಾದರಿಯಾಗಿದೆ.

ಡಾ. ಬಿ.ಆರ್. ಅಂಬೇಡ್ಕರ್ ಅವರು ರೂಪಿಸಿದ ಭಾರತೀಯ ಸಂವಿಧಾನ ಸಮಾನತೆ, ಸ್ವಾತಂತ್ರ್ಯ ಮತ್ತು ಭ್ರಾತೃತ್ವದ ಮೌಲ್ಯಗಳನ್ನು ಪ್ರತಿಪಾದಿಸಿದೆ. ಆದರೂ ಅಸ್ಪೃಶ್ಯತೆ ಸಂಪೂರ್ಣವಾಗಿ ನಿರ್ಮೂಲನೆಯಾಗಿಲ್ಲ. ಅದು ಇಂದಿಗೂ ಸಮಾಜದ ಹಲವು ಹಂತಗಳಲ್ಲಿ ಗೋಚರಿಸುತ್ತಿದೆ. ಆದ್ದರಿಂದ ಕೇವಲ ಕಾನೂನು ಸಾಕಾಗುವುದಿಲ್ಲ; ಸಮಾಜವೂ ಬದಲಾಗಬೇಕು.

ಈ ಹಿನ್ನೆಲೆಯಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಆರಂಭವಾಗಿರುವ ಈ ಸಮಾನತಾ ಅಭಿಯಾನ ಯಾವುದೇ ಕಾರಣಕ್ಕೂ ನಿಲ್ಲಬಾರದು. ಜಿಲ್ಲೆಯ ಪ್ರತಿಯೊಂದು ತಾಲ್ಲೂಕು, ಹೋಬಳಿ, ಗ್ರಾಮ ಪಂಚಾಯಿತಿ →

ಮತ್ತು ಹಳ್ಳಿಗೂ ಈ ಸಂದೇಶ ತಲುಪಬೇಕು. ಹತ್ತು ವರ್ಷ ಬೇಕಾದರೂ, ಹದಿನೈದು ವರ್ಷ ಬೇಕಾದರೂ, ಐವತ್ತು ವರ್ಷ ಬೇಕಾದರೂ ಈ ಚಳವಳಿ ನಿರಂತರವಾಗಿ ಸಾಗಬೇಕು. ಶಿವಮೊಗ್ಗ ಜಿಲ್ಲೆ ಸಂಪೂರ್ಣ ಅಸ್ಪೃಶ್ಯತೆ ಮುಕ್ತ ಜಿಲ್ಲೆ ಎನ್ನುವ ದಿನ ಬರುವವರೆಗೆ ಈ ಪ್ರಯತ್ನ ನಿಲ್ಲಬಾರದು.

ಇದು ಒಬ್ಬ ವ್ಯಕ್ತಿಯ ಅಥವಾ ಒಬ್ಬ ಸಂಘಟನೆಯ ಜವಾಬ್ದಾರಿಯಲ್ಲ. ಶಿವಪ್ಪ, ಬಿ. ಗೋಪಾಲ್, ನಿಖಿಲ್ ಅಥವಾ ಇನ್ನಾರೋ ನಾಯಕರು ಮಾತ್ರ ಈ ಹೋರಾಟವನ್ನು ನಡೆಸಬೇಕೆಂದಲ್ಲ ; ನಾವೆಲ್ಲರೂ ಈ ಚಳವಳಿಯ ಭಾಗವಾಗಬೇಕು. ಇಂದು ನಾವು ಮಾಡಿದ ಪ್ರತಿಜ್ಞೆಯನ್ನು ಕಾರ್ಯರೂಪಕ್ಕೆ ತರುವ ಸಂಕಲ್ಪ ನಮ್ಮದಾಗಬೇಕು. ಸಮಾಜದಲ್ಲಿ ಸಮಾನತೆ ಮತ್ತು ಭ್ರಾತೃತ್ವವನ್ನು ಬೆಳೆಸುವ ಕೆಲಸದಲ್ಲಿ ಪ್ರತಿಯೊಬ್ಬರೂ ಕೈಜೋಡಿಸಿದಾಗ ಮಾತ್ರ ಅಸ್ಪೃಶ್ಯತೆಯ ಮುಕ್ತ ಸಮಾಜವನ್ನು ನಿರ್ಮಿಸಲು ಸಾಧ್ಯ.

ಜೈ ಭೀಮ್.

# ಶಿವರಾಜ್ ಅವರ ಮನೆಯಲ್ಲಿ ಸಮಾನತೆಯ ಸಹಭೋಜನ

ತಿಪಟೂರು ತಾಲ್ಲೂಕಿನ ಆಲ್ಬೂರು ಗ್ರಾಮದಲ್ಲಿ ಶಿವರಾಜ್ ಅವರ ಮನೆಯಲ್ಲಿ ಸಮಾನತೆಯ ಸಹಭೋಜನ ಕಾರ್ಯಕ್ರಮ ಹಾಗೂ ಅದೇ ಗ್ರಾಮದ ಸರ್ಕಾರಿ ಶಾಲೆಯಲ್ಲಿ ಸಮಾನತಾ ಪ್ರತಿಜ್ಞೆ ಸ್ವೀಕಾರ ಸಭೆ ನಡೆಯಿತು. ಕಾರ್ಯಕ್ರಮಗಳಲ್ಲಿ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಅಂಕೇಗೌಡ, ಹಿರಿಯ ಹೋರಾಟಗಾರ ಬಿ. ಗೋಪಾಲ್, ಪಂಡಿತ್ ಮುನಿವೆಂಕಟಪ್ಪ, ಎಚ್. ಕೆ. ವಿವೇಕಾನಂದ, ಡಾ. ಹರೀಶ್, ಡಾ. ರುದ್ರೇಶ್ ಅದರಂಗಿ ಹಾಗೂ ಜಿ. ಮಂಜುನಾಥ್ ಭಾಗವಹಿಸಿ ಸಮಾನತೆ, ಭ್ರಾತೃತ್ವ ಮತ್ತು ಅಸ್ಪೃಶ್ಯತೆ ಮುಕ್ತ ಸಮಾಜ ನಿರ್ಮಾಣದ ಕುರಿತು ಸಂದೇಶ ನೀಡಿದರು.













27 ಜುಲೈ, 2026

# ಆಲ್ಲೂರು ಸರ್ಕಾರಿ ಶಾಲೆಯಲ್ಲಿ ಸಮಾನತಾ
# ಪ್ರತಿಜ್ಞೆ







# ಸುಬ್ಬಾರೆಡ್ಡಿ ಅವರಿಗೆ Doctarate ಬಂದ ಸಂದರ್ಭ ಅವರನ್ನು ಅರಿವು ಭಾರತ ತಂಡ ಸನ್ಮಾನ ಮಾಡಿದರು



# ಶೆಟ್ಟಿಕಲ್ಲು ಗ್ರಾಮದಲ್ಲಿ ಅಸ್ಪೃಶ್ಯತೆಗೆ ಅಂತ್ಯ:

## ಮನೆಗಳ ಬಾಗಿಲು ತೆರೆದು ಸಾಮಾಜಿಕ ಕ್ರಾಂತಿಗೆ ಮುನ್ನುಡಿ

2026ರ ಆಗಸ್ಟ್ 12ರಂದು ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನ ಶೆಟ್ಟಿಕಲ್ಲು ಗ್ರಾಮವು ಶತಮಾನಗಳಿಂದ ನಡೆದುಕೊಂಡು ಬಂದಿದ್ದ ಅಸ್ಪೃಶ್ಯತೆ ಆಚರಣೆಗೆ ಅಂತ್ಯ ಹಾಡುವ ಮೂಲಕ ಸಾಮಾಜಿಕ ಕ್ರಾಂತಿಗೆ ಸಾಕ್ಷಿಯಾಯಿತು. ಒಕ್ಕಲಿಗ ಹಾಗೂ ಸವಿತಾ ಸಮುದಾಯಕ್ಕೆ ಸೇರಿದ ನಾಲ್ಕು ಕುಟುಂಬಗಳು ದಲಿತ ಸಹೋದರರು ಮತ್ತು ಸಹೋದರಿಯರನ್ನು ಹೂವು ನೀಡಿ ತಮ್ಮ ಮನೆಗಳ ಒಳಗೆ ಆತ್ಮೀಯವಾಗಿ ಸ್ವಾಗತಿಸಿ ಸಮಾನತೆ ಮತ್ತು ಭ್ರಾತೃತ್ವದ ಸಂದೇಶ ಸಾರಿದವು. ಈ ಐತಿಹಾಸಿಕ ಕಾರ್ಯಕ್ರಮದಲ್ಲಿ ಕೋಲಾರ ಜಿಲ್ಲಾಧಿಕಾರಿ ಡಾ. ಎಂ. ಆರ್. ರವಿ ಹಾಗೂ ತಹಶೀಲ್ದಾರ್ ವಿ. ಗೀತಾ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಸಾಮಾಜಿಕ ಸಾಮರಸ್ಯದ ಈ ಮಹತ್ವದ ಹೆಜ್ಜೆಗೆ ಸಾಕ್ಷಿಯಾದರು.









## ಮುನೇಗೌಡರ ಮನೆಯಲ್ಲಿ ನಡೆದ ಸಮಾನತಾ ಸಹಭೋಜನ ಕಾರ್ಯಕ್ರಮದಲ್ಲಿ ಕೋಲಾರ ಜಿಲ್ಲಾಧಿಕಾರಿ ಡಾ. ಎಂ. ಆರ್. ರವಿ ಅವರ ಮಾತುಗಳು

ಎಲ್ಲರಿಗೂ ನಮಸ್ಕಾರ. ಇವತ್ತಿನ 'ಅರಿವು ಭಾರತ' ಕಾರ್ಯಕ್ರಮವು ಎಲ್ಲಾ ರೀತಿಯಲ್ಲೂ ಬಹಳ ವಿಶಿಷ್ಟವಾಗಿದೆ ಎಂಬುದನ್ನು ನಾವೆಲ್ಲರೂ ಒಪ್ಪಿಕೊಳ್ಳಬೇಕು. ಗೋಪಿನಾಥ್ ಅವರು ಪ್ರಾರಂಭದಲ್ಲಿಯೇ ಇದನ್ನು ಬಹಳ ಚೆನ್ನಾಗಿ ಹೇಳಿದರು. ಇದುವರೆಗೆ ಅರಿವು ಭಾರತ ಮಾಡಿದ ಕಾರ್ಯಕ್ರಮಗಳಲ್ಲೆಲ್ಲಾ, ಒಂದು ಊರಿನಲ್ಲಿ ಒಂದು ಮನೆಗೆ ನಾವೆಲ್ಲಾ ಭೇಟಿ ನೀಡಿ, ಆ ಮನೆಯ ಗೃಹಪ್ರವೇಶ ಮಾಡಿ, ಆ ಮನೆಯನ್ನು 'ಅಸ್ಪೃಶ್ಯತೆ ಮುಕ್ತ ಮನೆ' ಎಂದು ಘೋಷಣೆ ಮಾಡುವ ಪದ್ಧತಿ ಇತ್ತು. ಆದರೆ ಪ್ರಾಯಶಃ ಕಳೆದ ಎರಡುವರೆ ವರ್ಷಗಳ ಅವಧಿಯ ಓಟದಲ್ಲಿ, ಇಡೀ ಗ್ರಾಮವೇ ಒಂದು ಕ್ಲಸ್ಟರ್ ಮಾದರಿಯನ್ನು ಈ ಬಾರಿ ಅಳವಡಿಸಿಕೊಂಡಿದೆ ಎನಿಸುತ್ತಿದೆ. ಇದು ಬಹಳ ಆರೋಗ್ಯಕರವಾದ ಬೆಳವಣಿಗೆ. ಇದಕ್ಕೆ ಮುಖ್ಯವಾಗಿ ಈ ಸಭೆಯ ಅಧ್ಯಕ್ಷತೆ ವಹಿಸಿರುವ ಹಿರಿಯರು, ಅಚಲ ಪರಂಪರೆಯ ಗುರುಗಳಾದ ನಿಜಾನಂದ ಹಾಗೂ ಸುಬ್ಬಾರೆಡ್ಡಿ ಗುರುಗಳಿಗೆ, ಹಾಗೂ ಈ ಗ್ರಾಮದ ಸಮಸ್ತ ಒಳ್ಳೆಯ ಮನಸ್ಸುಗಳಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ನಮ್ಮಲ್ಲಿ ಎಲ್ಲರೂ 'ಒಳ್ಳೆಯವರಾಗಿರಬೇಕು, ಒಳ್ಳೆಯದು ಮಾಡಬೇಕು' ಎಂದು ಹೇಳುತ್ತಾರೆ. ಆದರೆ ಒಳ್ಳೆಯದು ಎಂದರೆ ಏನು ಎಂದು ಯಾರು ಹೇಳಿಕೊಟ್ಟಿಲ್ಲ. ಒಳ್ಳೆಯವರಾಗಿರುವುದು ಎಂದರೆ ಹೇಗೆ? ನನ್ನ ಹೆಂಡತಿ-ಮಕ್ಕಳನ್ನು ಸಾಕುವುದು, ಅವರಿಗೆ ವಿದ್ಯೆ ಕೊಡುವುದು ಅಥವಾ ನಮ್ಮ ಕುಟುಂಬದ ಕಲ್ಯಾಣ ಮಾಡಿಕೊಳ್ಳುವುದೇ? ನನಗೋಸ್ಕರ ಬದುಕುವುದು ವಿಶೇಷವಲ್ಲ; ಎಲ್ಲಾ ಪ್ರಾಣಿಗಳೂ ಅವರಿಗೋಸ್ಕರವೇ ಬದುಕುತ್ತವೆ. ಆದರೆ ಇನ್ನೊಬ್ಬರಿಗೋಸ್ಕರ ಬದುಕುವುದು, ಇನ್ನೊಬ್ಬರ ಕಷ್ಟಗಳಿಗೆ, ಸಮಸ್ಯೆಗಳಿಗೆ ಮತ್ತು ವೇದನೆಗಳಿಗೆ ಸ್ಪಂದಿಸುವ ಮನಸ್ಸಿದೆಯಲ್ಲ, ಅದು ಒಳ್ಳೆಯ ಮನಸ್ಸು. ಅದಕ್ಕೆ ಸಂಬಂಧಪಟ್ಟ ಕೆಲಸಕಾರ್ಯಗಳೆಲ್ಲವೂ ಒಳ್ಳೆಯ ಕೆಲಸಗಳು ಎಂದು ನನಗೆ ಅನಿಸುತ್ತದೆ.

ನಾವು ಜಾತಿ ಮತ್ತು ಅಸ್ಪೃಶ್ಯತೆಯ ಬಗ್ಗೆ ಮಾತನಾಡುತ್ತಿರುವುದು ಇವತ್ತಿನ ಮಾತಲ್ಲ. ಇಷ್ಟೆಲ್ಲಾ ವಿದ್ಯಾವಂತರಾಗಿರುವ ನಾವು, ವಿಜ್ಞಾನ ಮತ್ತು ಆಧುನಿಕತೆಯಲ್ಲಿ ಬಹಳ ಎತ್ತರಕ್ಕೆ ಬೆಳೆದಿದ್ದೇವೆ. ಮನುಷ್ಯ ಇಲ್ಲಿ ಬದುಕುವುದು ಸಾಕು ಎಂದು ಬಾಹ್ಯಾಕಾಶಕ್ಕೆ, ಚಂದ್ರಗ್ರಹಕ್ಕೆ ಹೋಗಿ ಬರುತ್ತಿದ್ದಾನೆ. ಆದರೆ ಅವನ ಮನಸ್ಸು ಮಾತ್ರ ಇನ್ನೂ ಸಂಕುಚಿತವಾಗಿದೆ ಎನಿಸುತ್ತದೆ. ಆಕಾಶದಲ್ಲಿ ಬಹಳ ಎತ್ತರಕ್ಕೆ ಹಾರಾಡುವ ರಣಹದ್ದುಗಳನ್ನು ನೀವು ನೋಡಿರಬಹುದು. ಅವು ಎತ್ತರದಲ್ಲಿ ಹಾರಾಡಿದರೂ, ಹೊಟ್ಟೆ ಹಸಿವಾದಾಗ ಆಹಾರಕ್ಕಾಗಿ ಭೂಮಿಗೆ ಬರಲೇಬೇಕು. ಎಷ್ಟೇ ಎತ್ತರದಲ್ಲಿದ್ದರೂ ಅವುಗಳ ದೃಷ್ಟಿ ತೀಕ್ಷ್ಣವಾಗಿ ಭೂಮಿಯ ಮೇಲಿರುವ ಆಹಾರದ ಮೇಲೆಯೇ ಇರುತ್ತದೆ. ಅಂದರೆ, ಮನುಷ್ಯ ಕೇವಲ ರೆಕ್ಕೆಪುಕ್ಕಗಳನ್ನು ಕಟ್ಟಿಕೊಂಡು ಹಾರಾಡುತ್ತಿದ್ದಾನೆ ವಿನಃ, ತನ್ನ ಬೇರು ಮತ್ತು ಮಣ್ಣಿನೊಂದಿಗಿನ ಸಾವಯವ ಸಂಬಂಧವನ್ನು ಕಳೆದುಕೊಳ್ಳುತ್ತಿದ್ದಾನೆ.

ನನಗೆ ಬಹಳ ಬೇಸರವಾಗುವ ಸಂಗತಿಯೆಂದರೆ, ನಾನು ಅಥವಾ ಅರಿವು ಭಾರತದವರು ನಿಮ್ಮ ಮನೆಗೆ ಬಂದು 'ಎಲ್ಲರನ್ನೂ ಪ್ರೀತಿಯಿಂದ ಸ್ವಾಗತಿಸಿ' ಎಂದು ಏಕೆ ಹೇಳಬೇಕು? ನಿಮಗೂ ವಿದ್ಯೆ ಇದೆ, ವಿವೇಕವಿದೆ, ಜಗತ್ತನ್ನು ನೋಡಿದ್ದೀರಿ, ಸಮಾಜದಲ್ಲಿ ಆಗುತ್ತಿರುವ ಬದಲಾವಣೆಗಳು ಗೊತ್ತಿವೆ. ಎಲ್ಲವೂ ಗೊತ್ತಿದ್ದ ಮೇಲೆ, ಯಾಕೆ ನಮ್ಮ ಮನೆಗೆ ಎಲ್ಲರನ್ನೂ ಪ್ರೀತಿಯಿಂದ ಸ್ವಾಗತಿಸಲು ಸಾಧ್ಯವಾಗುತ್ತಿಲ್ಲ? ಯಾವ ಶಕ್ತಿ ನಮ್ಮನ್ನು ಅಡ್ಡಿಪಡಿಸುತ್ತಿದೆ ಎಂಬುದನ್ನು ನಾವು ಯೋಚನೆ →

ಮಾಡಬೇಕಲ್ಲವೇ? ನಾವು ಅಕ್ಷರ ಕಲಿತಿದ್ದೇವೆ, ವಿದ್ಯಾವಂತರಾಗಿದ್ದೇವೆ, ಅನುಕೂಲಕರವಾದ ವಾತಾವರಣದಲ್ಲಿದ್ದೇವೆ. ಆದರೆ ಈ ಅನುಕೂಲತೆ ನಮ್ಮ ಮನಸ್ಸಿಗೆ ಯಾಕಿಲ್ಲ? ನಮ್ಮ ಮನಸ್ಸುಗಳು ಇನ್ನೂ ಅನುಕೂಲಕರವಾದ ವಾತಾವರಣವನ್ನು ಸೃಷ್ಟಿ ಮಾಡುತ್ತಿಲ್ಲ. ಹಾಗಾಗಿ ಜಾತಿಗಿಂತ ಈ ಮನಸ್ಥಿತಿ ಇದೆಯಲ್ಲ, ಇದು ಬಹಳ ದೊಡ್ಡ ಸವಾಲಾಗಿ ಪರಿಣಮಿಸುತ್ತಿದೆ.

ಈ ಜಾತಿ ಎಂಬುದು ಯಾವಾಗ ಬರುತ್ತದೆ? ನಾನು ಅದನ್ನು ಆಚರಣೆ ಮಾಡಿದಾಗ ತಾನೇ. ನನ್ನ ಮನಸ್ಸಿನಲ್ಲಿ 'ನಾನು ಬೇರೆಯವರಿಗಿಂತ ಶ್ರೇಷ್ಠ' ಎಂಬ ಭಾವನೆ ಕೂತುಬಿಟ್ಟಿದೆ. ಆ ಶ್ರೇಷ್ಠತೆಯ ಭಾವನೆ ಆಳವಾಗಿ ಬೇರೂರಿರುವುದರಿಂದ ಅದರಿಂದ ಆಚೆ ಬರಲು ನಮಗೆ ಆಗುತ್ತಿಲ್ಲ. ನಾವು ಭ್ರಮಾದೀನರಾಗಿ, ಆ ಭ್ರಮೆಯ ಬದುಕಿನಲ್ಲಿಯೇ ಮನುಷ್ಯ ವಿರೋಧಿ ಚಟುವಟಿಕೆಗಳನ್ನು ಮಾಡುತ್ತಾ ಬದುಕುತ್ತಿದ್ದೇವೆ. ಇದು ನಮ್ಮ ಮೇಲೆ ನಾವೇ ಮಾಡಿಕೊಳ್ಳುತ್ತಿರುವ ಬಹಳ ದೊಡ್ಡ ದ್ರೋಹ ಎನಿಸುತ್ತದೆ. ಸುಬ್ಬಾರೆಡ್ಡಿ ಅವರ ಶಿಷ್ಯ ಪರಂಪರೆಯ ಆಚಾರ-ವಿಚಾರಗಳು ಮತ್ತು ನಂಬಿಕೆಗಳು ಇಷ್ಟು ವರ್ಷಗಳ ಕಾಲ ಉಳಿದುಕೊಂಡಿದೆ ಎಂದರೆ, ಅದರಲ್ಲಿ ಏನೋ ಒಂದು ಶಕ್ತಿ ಮತ್ತು ಜೀವಂತಿಕೆ ಇರಬೇಕು. ಪ್ರಪಂಚದ ಯಾವುದೇ ದೇಶದಲ್ಲಿ ಇಲ್ಲದಷ್ಟು ಧರ್ಮಗಳು, ಜಾತಿಗಳು, ಸಂಪ್ರದಾಯಗಳು ನಮ್ಮ ದೇಶದಲ್ಲಿವೆ. ಇಷ್ಟು ವೈವಿಧ್ಯತೆಯನ್ನು ನಾವು ಶತಮಾನಗಳಿಂದ ಉಳಿಸಿಕೊಂಡು ಬೆಳೆಸಿಕೊಂಡು ಬರುತ್ತಿದ್ದೇವೆ. ನಮಗೆ ಬೇಕಾದ ಸೌಲಭ್ಯಗಳನ್ನು, ಸುಖಗಳನ್ನು ಪಡೆಯುತ್ತಿದ್ದೇವೆ. ಆದರೆ ಆ ಅನಾದಿ ಕಾಲದ ಅಹಂಕಾರದ ಮನಸ್ಸನ್ನು ಬಿಡಲು ನಾವು ಪ್ರಜ್ಞಾಪೂರ್ವಕ ಪ್ರಯತ್ನಗಳನ್ನು ಮಾಡುತ್ತಿಲ್ಲ. ಅಂತಹ ಪ್ರಯತ್ನ ಮಾಡುತ್ತಿರುವುದು ನಮ್ಮ ಅರಿವು ಭಾರತದ ತಂಡ.

ನನ್ನ 38 ವರ್ಷಗಳ ಸಾರ್ವಜನಿಕ ಹಾಗೂ ಸರ್ಕಾರಿ ಸೇವೆಯಲ್ಲಿ, ಇಡೀ ಕರ್ನಾಟಕದ ಅನೇಕ ಜಿಲ್ಲೆಗಳಲ್ಲಿ ಸಾಮಾಜಿಕ, ಆರ್ಥಿಕ ಬದುಕು ಮತ್ತು ಜನ ಸ್ಪಂದಿಸುವ ರೀತಿಯನ್ನು ಗಮನಿಸಿದ್ದೇನೆ. ನಾವೆಲ್ಲರೂ ಬುದ್ಧಿವಂತರಾಗುತ್ತಿದ್ದೇವೆ, ವಿಚಾರವಂತರಾಗುತ್ತಿದ್ದೇವೆ, ಆದರೆ ಆಳದಲ್ಲಿ ನಾವೆಲ್ಲರೂ ಇನ್ನೂ ಬಹಳಷ್ಟು ಸಂಪ್ರದಾಯವಾದಿಗಳಾಗಿ, ಜಾತಿವಾದಿಗಳಾಗಿ ಮತ್ತು ಸ್ವಾರ್ಥಿಗಳಾಗಿ ಬದುಕುತ್ತಿದ್ದೇವೆ. ನಾವು ಆತ್ಮಹತ್ಯೆಯಿಂದ (ಆಂತರಿಕ ಮರಣದಿಂದ) ಆಚೆ ಬರುವವರೆಗೂ ಈ ಜಾತಿ ವ್ಯವಸ್ಥೆ ಅಷ್ಟು ಸುಲಭವಾಗಿ ಹೋಗುವುದಿಲ್ಲ. ಪ್ರತಿಯೊಬ್ಬರಿಗೂ ತಮ್ಮ ಜಾತಿಯ ಬಗ್ಗೆ ಪ್ರೀತಿ ಇದ್ದೇ ಇರುತ್ತದೆ. ಅದನ್ನು ಇಟ್ಟುಕೊಳ್ಳಿ, ಬೇಡ ಎನ್ನುವುದಿಲ್ಲ. ಆದರೆ ಅದನ್ನು ಸಾರ್ವತ್ರೀಕರಣ ಮಾಡಬೇಡಿ.

ನಮ್ಮ ಹಾಗೆ ಇನ್ನೊಬ್ಬರು ಮನುಷ್ಯರು ಎಂಬ ಭಾವನೆ ಯಾಕೆ ಬರುವುದಿಲ್ಲ? ಅಪಘಾತವಾಗಿ ರಸ್ತೆಯಲ್ಲಿ ಬಿದ್ದಾಗ ರಕ್ತ ಕೊಡುವವನು ನನ್ನ ಜಾತಿಯವನಾಗಿರುತ್ತಾನೆಯೇ? ನನ್ನ ಹೆಂಡತಿಗೆ ಹೆರಿಗೆ ನೋವಾದಾಗ ಆಸ್ಪತ್ರೆಯಲ್ಲಿ ರಕ್ತ ಕೊಡುವವರು ಅಥವಾ ಚಿಕಿತ್ಸೆ ನೀಡುವವರು ನನ್ನ ಜಾತಿಯವರೇ ಆಗಿರುತ್ತಾರೆಯೇ? ನನ್ನ ಮಕ್ಕಳಿಗೆ ಕಷ್ಟವಾದಾಗ ಸಹಾಯ ಮಾಡುವವರು ಕೇವಲ ನನ್ನ ಬಂಧುಗಳೇ ಆಗಿರುತ್ತಾರೆಯೇ? ಯಾವ ಸಂದರ್ಭದಲ್ಲೂ ಇಲ್ಲದಿರುವ ಜಾತಿ, ಮಕ್ಕಳ ಮದುವೆ ಮಾಡುವಾಗ ಅಥವಾ ಮನೆಯಲ್ಲಿ ಕೆಲವೊಂದು ಆಚರಣೆ ಮಾಡುವಾಗ ಮಾತ್ರ ಏಕೆ ಬರುತ್ತದೆ? ಬದುಕಬೇಕಾದರೆ ಯಾರು ರಕ್ತ ಕೊಟ್ಟರೂ ಪರವಾಗಿಲ್ಲ, ಆದರೆ ಸಂಬಂಧ ಬೆಳೆಸಲು ಮಾತ್ರ ಜಾತಿ ಬೇಕೇ? ಇದೊಂದು ರೀತಿಯ ಬೂಟಾಟಿಕೆಯ ಬದುಕು. ನಮ್ಮನ್ನು ನಾವೇ ಮೋಸ ಮಾಡಿಕೊಂಡು ಬದುಕುತ್ತಿದ್ದೇವೆ. ಅಬ್ರಹಾಂ ಲಿಂಕನ್ ಹೇಳಿದ ಹಾಗೆ, "ಕೆಲವರನ್ನು ಯಾವಾಗಲೂ ಮೂರ್ಖರನ್ನಾಗಿ ಮಾಡಬಹುದು, ಎಲ್ಲರನ್ನೂ ಕೆಲವು ಕಾಲ ಮೂರ್ಖರನ್ನಾಗಿ ಮಾಡಬಹುದು, ಆದರೆ ಎಲ್ಲರನ್ನೂ ಎಲ್ಲಾ ಕಾಲದಲ್ಲೂ ಮೂರ್ಖರನ್ನಾಗಿ ಮಾಡಲು ಸಾಧ್ಯವಿಲ್ಲ." ನಮ್ಮ ವಿದ್ಯೆಗೆ, ಸಂಸ್ಕಾರಕ್ಕೆ ನಾವೇ ಅಪಚಾರ ಮಾಡುತ್ತಿದ್ದೇವೆ. ನಾವು ತಿನ್ನುವ ಅನ್ನಕ್ಕೆ ನಾವೇ ದ್ರೋಹ ಬಗೆಯುತ್ತಿದ್ದೇವೆ. ಈ ಅಹಂಕಾರ, ಅಧಿಕಾರದ ಮದ ಮತ್ತು ಸಂಪತ್ತಿನ ಮದ ನಮ್ಮನ್ನು ಆಳುತ್ತಿದೆ.

ಇಷ್ಟೆಲ್ಲಾ ವಿದ್ಯಾವಂತರಾಗಿ, ದೇಶ ಸುತ್ತಿ ಬಂದರೂ ಮನೆಗೆ ಮರಳಿದಾಗ ಅದೇ ಸಂಕುಚಿತ ಮನಸ್ಸು, ಅದೇ ಆಚಾರಗಳು. ಬೇರೆಯವರು ನಮ್ಮ ಹಾಗೆ ಬದುಕಬೇಕು ಎಂಬ ಸಾಮಾನ್ಯ ತಿಳುವಳಿಕೆ ನಮಗಿರಬೇಕಲ್ಲವೇ? ನಾಯಿಗೆ ತೋರುವ ಪ್ರೀತಿಯನ್ನು ನಾವು ಮನುಷ್ಯರ ಮೇಲೆ ಏಕೆ ತೋರಿಸುವುದಿಲ್ಲ? →

ಮನುಷ್ಯ ಘನತೆಯಿಂದ ಬದುಕಬೇಕು. ಪ್ರತಿಯೊಬ್ಬ ವ್ಯಕ್ತಿಗೂ ಆತ್ಮಗೌರವ ಮತ್ತು ಸ್ವಾಭಿಮಾನ ಮುಖ್ಯ. ಕೈಯೊಡ್ಡಿ ಬದುಕಲು ಯಾರೂ ಇಷ್ಟಪಡುವುದಿಲ್ಲ. ಇವತ್ತು ನನ್ನೊಡನೆ ಕೆಲಸ ಮಾಡುತ್ತಿರುವ ಅನೇಕ ಚಾಲಕರು ಕಾಯಕ ಸಮಾಜದಿಂದ ಬಂದವರಾಗಿದ್ದು, ತಮ್ಮ ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸಿ ಬೆಳೆಸಬೇಕು ಎಂಬ ಛಲ ಹೊಂದಿದ್ದಾರೆ. ನನ್ನ ವಾಹನ ಚಾಲಕರ ಮಗಳನ್ನು ಇಂಗ್ಲೆಂಡಿಗೆ ಕಳುಹಿಸಿ ಓದಿಸುತ್ತಿರುವ ಆ ಚೈತನ್ಯ ಈ ಸಮಾಜದಲ್ಲಿ ಬರಬೇಕು. ಶಿಕ್ಷಣ ಪಡೆದುಕೊಳ್ಳುವುದಷ್ಟೇ ಮುಖ್ಯವಲ್ಲ; ಆ ಶಿಕ್ಷಣ ಎಷ್ಟು ಗುಣಾತ್ಮಕವಾಗಿದೆ ಮತ್ತು ಅದರಲ್ಲಿ ಎಷ್ಟು ಮನುಷ್ಯತ್ವವಿದೆ ಎಂಬುದು ಮುಖ್ಯ. ಶಿಕ್ಷಣ ಬರೀ ವ್ಯಾಪಾರವಾಗಿಬಿಟ್ಟರೆ, ನಾಳೆ ಆ ಮಕ್ಕಳು ನಮ್ಮನ್ನು ಕಾಪಾಡುತ್ತಾರೆ ಎಂಬ ಸ್ವಾರ್ಥದಿಂದ ಓದಿಸಿದರೆ, ಅವರು ಮನುಷ್ಯರಾಗಿ ಬೆಳೆಯಲು ಹೇಗೆ ಸಾಧ್ಯ?

ಕೇವಲ ಹುಟ್ಟನ್ನು ಗಮನದಲ್ಲಿಟ್ಟುಕೊಂಡು ಒಬ್ಬ ವ್ಯಕ್ತಿಯನ್ನು ಅಳೆಯುವುದು ಅಥವಾ ಅವಮಾನಿಸುವುದು ಒಪ್ಪುವಂತಹದ್ದಲ್ಲ. ಮನುಷ್ಯರಾಗಿ ಇನ್ನೊಬ್ಬರೊಂದಿಗೆ ಸಂವೇದನಾಶೀಲತೆಯಿಂದ ವರ್ತಿಸದೆ ಹೋದರೆ ಯಾವ ವಿದ್ಯೆ ಇದ್ದರೇನು? ಮನುಷ್ಯರನ್ನು ಮನುಷ್ಯರಾಗಿ ನೋಡುವುದು ಪ್ರಾಥಮಿಕ ತಿಳುವಳಿಕೆ. ಇದನ್ನು ನಾವು ಎಲ್ಲಿಯವರೆಗೆ ಮಾಡುವುದಿಲ್ಲವೋ, ಅಲ್ಲಿಯವರೆಗೆ ಈ ಡಾಂಭಿಕತೆಯ ಬದುಕು ಮುಂದುವರಿಯುತ್ತದೆ. ಲೈಬ್ರರಿ ಮುಂದೆ ನಿಂತಾಗ ನನಗೆ ಅನಿಸಿದ್ದು, 'ನಾನು ಎಷ್ಟು ಸಣ್ಣವನು, ನಾನು ತಿಳಿದುಕೊಳ್ಳಬೇಕಾದದ್ದು ಇನ್ನೂ ಎಷ್ಟಿದೆ' ಎಂದು. ನಮ್ಮ ಅಹಂಕಾರವನ್ನು ಬಿಟ್ಟು, ಇನ್ನೊಬ್ಬರನ್ನು ಗೌರವಿಸಲು ಯಾವ ವಿಶ್ವವಿದ್ಯಾಲಯದ ಪ್ರಮಾಣಪತ್ರವೂ ಬೇಕಿಲ್ಲ. "ನಮ್ಮ ಮನೆ ಚಿಕ್ಕದು, ಯಾರು ಬೇಸರ ಮಾಡಿಕೊಳ್ಳಬೇಡಿ" ಎಂದು ಹೇಳುವ ದೊಡ್ಡ ಮನಸ್ಸು ನಮ್ಮದಾಗಬೇಕು. ಮನೆ ಚಿಕ್ಕದಾದರೂ ಮನಸ್ಸು ದೊಡ್ಡದಿರಬೇಕು. ಆ ಭಗವಂತ ಇರುವುದು ನಿಮ್ಮ ಅಂತರಂಗದಲ್ಲಿ, ನಿಮ್ಮ ಹೃದಯದಲ್ಲಿ. ಅದು ಶುದ್ಧವಾಗಿದ್ದರೆ ಸಾಕು. ಹೊರಗಡೆ ಶತ್ರುಗಳನ್ನು ಗೆಲ್ಲುವುದು ಸುಲಭ, ಆದರೆ ಒಳಗಿರುವ ಶತ್ರುಗಳನ್ನು (ಅಹಂಕಾರ, ಸ್ವಾರ್ಥ) ಗೆದ್ದರೆ ಮಾತ್ರ ನಾವು ಮಹಾವೀರರಾಗುತ್ತೇವೆ.

ಸರ್ಕಾರಿ ಸೇವೆಯಲ್ಲಿ 33 ವರ್ಷಗಳಿಗೂ ಹೆಚ್ಚು ಕಾಲದಿಂದ ಕೆಲಸ ಮಾಡುತ್ತಿದ್ದೇನೆ. ಸಮಾಜ ಮತ್ತು ಸರ್ಕಾರ ನನ್ನನ್ನು ಇಷ್ಟು ವರ್ಷ ಸಾಕಿ ಸಲುಹಿದೆ. ನಾವು ಸಮಾಜದ ಋಣದಲ್ಲಿದ್ದೇವೆ. ಆ ಋಣದಿಂದ ಮುಕ್ತರಾಗಲು ನಾವೆಲ್ಲರೂ ಸಮಾಜಕ್ಕೆ ಏನನ್ನಾದರೂ ಮರಳಿ ನೀಡಬೇಕು. ಇಂತಹ ಸತ್ಕಾರ್ಯಗಳಲ್ಲಿ 'ಅರಿವು ಭಾರತ' ಬಹಳ ಪ್ರಮುಖ ಸಾಧನವಾಗಿ, ವೇದಿಕೆಯಾಗಿ ನಮಗೆಲ್ಲಾ ಸಹಕಾರ ನೀಡುತ್ತಿದೆ. ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶ ನೀಡಿದ ಮುನೇಗೌಡರು, ಅವರ ಶ್ರೀಮತಿ ಮತ್ತು ಈ ಕಾರ್ಯಕ್ರಮದ ಎಲ್ಲಾ ಸ್ನೇಹಿತರಿಗೆ ವೈಯಕ್ತಿಕವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ತಾವು ಇಂದು ತಮ್ಮ ಗ್ರಾಮದಲ್ಲಿ ಬಹಳ ದೊಡ್ಡ ಇತಿಹಾಸವನ್ನು ನಿರ್ಮಾಣ ಮಾಡಿದ್ದೀರಿ. ನಾವೆಲ್ಲರೂ ನಾರು ಇದ್ದ ಹಾಗೆ; ಸನ್ಮಾರ್ಗದಲ್ಲಿ ನಡೆದಾಗ, ಸತ್ಕಾರ್ಯಗಳನ್ನು ಮಾಡಿದಾಗ ನಮಗೂ ಸ್ವರ್ಗದ ದಾರಿ ಸಿಗುತ್ತದೆ. ಆ ಸತ್ಕಾರ್ಯಗಳಲ್ಲಿ ಅರಿವು ಭಾರತ ಕೂಡ ಒಂದು. ಸಮಾಜದಲ್ಲಿ ಕಗ್ಗತ್ತಲು ಆವರಿಸಿದಾಗ ಬರೀ ದೀಪ, ಬೆಂಕಿಕಡ್ಡಿ ಹಿಡಿದುಕೊಂಡರೆ ಸಾಲದು; ಅದನ್ನು ಹೊತ್ತಿಸುವವರು ಬೇಕು. ನಾವೆಲ್ಲರೂ ಆ ದೀಪ ಹಚ್ಚುವ ಕೆಲಸವನ್ನು ಮಾಡಬೇಕು. ಬದುಕಿದಷ್ಟು ದಿನ ಕರಗಿ, ಆ ಬೆಳಕನ್ನು ಮತ್ತೊಬ್ಬರಿಗೆ ನೀಡಬೇಕು. ಧನ್ಯವಾದಗಳು.



## ಮುನೇಗೌಡರ ಮನೆಯಲ್ಲಿ ನಡೆದ ಸಮಾನತಾ ಸಹಭೋಜನ ಕಾರ್ಯಕ್ರಮದಲ್ಲಿ ತಹಶೀಲ್ದಾರರು ವಿ. ಗೀತಾ ಅವರ ಮಾತುಗಳು

ಇತಿಹಾಸವನ್ನು ನಾವು ತೆರೆದು ನೋಡಿದರೆ, ಜಗಜ್ಯೋತಿ ಬಸವಣ್ಣನವರು ಮತ್ತು ಶರಣರು ಸಮಾಜದಲ್ಲಿದ್ದ ಮೂಢನಂಬಿಕೆಗಳು, ಅಸ್ಪೃಶ್ಯತೆ ಹಾಗೂ ದುಷ್ಟ ಪದ್ಧತಿಗಳನ್ನು ಯಾವ ರೀತಿ ನಿರ್ಮೂಲನೆ ಮಾಡಿದರು ಎಂಬುದು ತಿಳಿದುಬರುತ್ತದೆ. ಅವರು ಕೇವಲ ದುಷ್ಟ ಪದ್ಧತಿಗಳನ್ನು ತೊಡೆದುಹಾಕಿದ್ದು ಮಾತ್ರವಲ್ಲದೆ, ಜನರ ಮನಸ್ಸಿನಲ್ಲಿ ಜಾಗೃತಿಯನ್ನು ಮೂಡಿಸಿ ಸನ್ಮಾರ್ಗವನ್ನು ತೋರಿಸಿದರು.

ನಾವು ಪ್ರತ್ಯಕ್ಷವಾಗಿ ಜನರ ಮನೆಗಳಿಗೆ ಭೇಟಿ ನೀಡಿದಾಗ ನಿಜಕ್ಕೂ ಹೆಮ್ಮೆ ಎನಿಸುತ್ತದೆ. ಅವರು ತಮ್ಮ ಅಡುಗೆಮನೆಯಲ್ಲಿಯೇ ನಮ್ಮನ್ನು ಕುಳ್ಳಿರಿಸಿ, ಆತಿಥ್ಯ ನೀಡಿ ಗೌರವಿಸಿದಾಗ ಸಿಗುವ ತೃಪ್ತಿ ಅಪಾರ. ಇಂತಹ ಅನುಭವಗಳು ನಮ್ಮಲ್ಲಿದ್ದ 'ನಾವು ಸಹಾಯ ಪಡೆದುಕೊಳ್ಳುವವರು/ಹೀನರು' ಎಂಬ ಭಾವನೆಯನ್ನು ಸಂಪೂರ್ಣವಾಗಿ ಅಳಿಸಿಹಾಕುತ್ತವೆ. "ಯಾರೂ ಯಾರಿಗಿಂತಲೂ ಕಡಿಮೆಯಿಲ್ಲ, ನಾವೆಲ್ಲರೂ ಸಮಾಜದಲ್ಲಿ ಸಮಾನರು" ಎಂಬ ನಂಬಿಕೆ ಮತ್ತು ಜಾಗೃತಿ ಇದರಿಂದ ಮೂಡುತ್ತದೆ.

ಕೆಲವೊಮ್ಮೆ ವೈಯಕ್ತಿಕ ಒತ್ತಡಗಳು ಅಥವಾ ಕೆಲಸದ ಒತ್ತಡಗಳಿಂದಾಗಿ ನಮಗೆ ನೇರವಾಗಿ ಪ್ರತಿಯೊಂದು ಕಾರ್ಯಕ್ರಮದಲ್ಲಿ ಭಾಗವಹಿಸಲು ಸಾಧ್ಯವಾಗದಿರಬಹುದು. ಅದಕ್ಕಾಗಿ ಕ್ಷಮೆಯಿರಲಿ. ಆದರೆ, ಈ ತಾಲೂಕಿನ ಮನೆಮಗಳಾಗಿ, ನನ್ನ ಸಹಕಾರ ಮತ್ತು ಬೆಂಬಲ ಪ್ರತಿಯೊಂದು ಸಮಾಜಮುಖಿ ಕಾರ್ಯಕ್ರಮಗಳಿಗೂ ಸದಾ ಇದ್ದೇ ಇರುತ್ತದೆ.

ಸಮಾಜ ಸುಧಾರಣೆಯ ದಿಕ್ಕಿನಲ್ಲಿ ಸಾಗುತ್ತಿರುವ ಈ ಕಾರ್ಯಕ್ರಮಗಳು ಇಲ್ಲಿಗೆ ಮುಗಿಯುವುದಿಲ್ಲ. ಸಮಾಜವನ್ನು ಸುಧಾರಿಸುವ ಮತ್ತು ಪ್ರತಿಯೊಬ್ಬರಿಗೂ ಸಮಾನತೆ ತಂದುಕೊಡುವ ಈ ದೃಢವಾದ ಹೆಜ್ಜೆಗಳು ಇಂದಿಗೂ, ಮುಂದಿಗೂ ಮುಂದುವರಿಯುತ್ತಲೇ ಇರುತ್ತವೆ ಎಂಬುದನ್ನು ಈ ಸಂದರ್ಭದಲ್ಲಿ ಹಂಚಿಕೊಳ್ಳಲು ಬಯಸುತ್ತೇನೆ.

# ಸಯ್ಯದ್ ಸದಾತುಲ್ಲಾ ಅವರ ಮನೆಯಲ್ಲಿ ಸಮಾನತೆಯ ಸಹಭೋಜನ

2026ರ ಆಗಸ್ಟ್ 12ರಂದು ಸಾಮುದಾಯಿಕ ಸೌಹಾರ್ದತೆ ಹಾಗೂ ಸಮಾನತೆಯ ಮೌಲ್ಯಗಳನ್ನು ಉತ್ತೇಜಿಸುವ ಉದ್ದೇಶದಿಂದ ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನ ತಾಯಲೂರು ಗ್ರಾಮದ ಸಯ್ಯದ್ ಸದಾತುಲ್ಲಾ ಅವರ ನಿವಾಸದಲ್ಲಿ ಸಮಾನತೆಯ ಸಹಭೋಜನ ಕಾರ್ಯಕ್ರಮ ನಡೆಯಿತು. ವಿವಿಧ ಸಮುದಾಯಗಳ ಜನರು ಒಂದಾಗಿ ಪಾಲ್ಗೊಂಡು ಪರಸ್ಪರ ಆತ್ಮೀಯತೆ, ಸಹೋದರತ್ವ ಮತ್ತು ಸಾಮಾಜಿಕ ಸಾಮರಸ್ಯವನ್ನು ಬಲಪಡಿಸುವ ಸಂಕಲ್ಪದೊಂದಿಗೆ ಸಹಭೋಜನ ನಡೆಸಿದರು. ಕಾರ್ಯಕ್ರಮವು ಜಾತಿ, ಧರ್ಮ ಹಾಗೂ ಸಮುದಾಯಗಳ ನಡುವಿನ ಭಿನ್ನತೆಗಳನ್ನು ಮೀರಿ ಮಾನವೀಯತೆ ಮತ್ತು ಸಮಾನತೆಯ ಸಂದೇಶವನ್ನು ಸಮಾಜಕ್ಕೆ ಸಾರುವಲ್ಲಿ ಅರ್ಥಪೂರ್ಣ ವೇದಿಕೆಯಾಯಿತು.












2026ರ ಆಗಸ್ಟ್ 26ರಂದು **'ಮುಂದೆ ನಡೆದವರು: ಕೋಲಾರ ಜಿಲ್ಲೆಯ ಮುಂಚೂಣಿಗರ ಪರಿಚಯ ಮತ್ತು ಪ್ರೇರಣೆ'** ಕೃತಿಯನ್ನು ವಿಧಾನ ಪರಿಷತ್ತಿನ ಮಾಜಿ ಸಭಾಧ್ಯಕ್ಷರಾದ ವಿ. ಆರ್. ಸುದರ್ಶನ್ ಅವರು ಬಿಡುಗಡೆ ಮಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೋಲಾರ ಜಿಲ್ಲಾಧಿಕಾರಿ ಡಾ. ಎಂ. ಆರ್. ರವಿ ವಹಿಸಿದ್ದರು. ಕೃತಿಯ ಕುರಿತು ಹಿರಿಯ ಪತ್ರಕರ್ತ ಕೆ. ನರಸಿಂಹಮೂರ್ತಿ. ಕಾರ್ಯಕ್ರಮದಲ್ಲಿ ಎನ್. ಬಿ. ಗೋಪಾಲಗೌಡ, ಟಿ. ವಿಜಯಕುಮಾರ್, ಪಂಡಿತ್ ಮುನಿವೆಂಕಟಪ್ಪ, ನಿಜಾನಂದ ಸುಬ್ಬಾರೆಡ್ಡಿ ಹಾಗೂ ವಾರಿಧಿ ಮಂಜುನಾಥ್ ರೆಡ್ಡಿ ಉಪಸ್ಥಿತರಿದ್ದು, ಕೃತಿ ಬಿಡುಗಡೆ ಸಮಾರಂಭಕ್ಕೆ ಸಾಕ್ಷಿಯಾಗಿ ಶುಭ ಹಾರೈಸಿದರು.


ಮುಂದೆ
ನಡೆದವರು









ಕೃತಿ ಬಿಡುಗಡೆ



# ´ಮುಂದೆ ನಡೆದವರು´ ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್‌ನ ಮಾಜಿ ಸಭಾಧ್ಯಕ್ಷರಾದ ವಿ. ಆರ್. ಸುದರ್ಶನ್ ಅವರ ಮಾತುಗಳು

ಅಂಬೇಡ್ಕರ್ ಅವರು ಹೇಳಿದಂತೆ, 'ಇತಿಹಾಸದ ಅರಿವಿಲ್ಲದವರು ಇತಿಹಾಸವನ್ನು ಸೃಷ್ಟಿಸಲಾರರು.' ಈ ಮಾತಿನ ಹಿನ್ನೆಲೆಯಲ್ಲಿ ಇತಿಹಾಸವನ್ನು ಸೃಷ್ಟಿಸಿದವರ ಬಗ್ಗೆ ನಾವಿಂದು ಮಾತನಾಡಬೇಕಿದೆ. ವಿವಿಧ ಕ್ಷೇತ್ರಗಳಲ್ಲಿ ಹಾಗೂ ವಿವಿಧ ವರ್ಗಗಳಿಂದ ಬಂದು, ತಮ್ಮದೇ ಆದ ಅನುಭವ ಮತ್ತು ಹೋರಾಟಗಳಿಂದ ಸಮಾಜಕ್ಕೆ ಸ್ಫೂರ್ತಿಯಾಗಿರುವ ೫೬ ಜನ ಸಾಧಕರನ್ನು ಈ ಕೃತಿಯ ಮೂಲಕ ಮುಂದಿನ ಪೀಳಿಗೆಗೆ ಮಾದರಿಯಾಗುವಂತೆ ಕಟ್ಟಿಕೊಡಲಾಗಿದೆ.

ಸಾರ್ವಜನಿಕ ಜೀವನದಲ್ಲಿ ಮತ್ತು ಆಡಳಿತದಲ್ಲಿ ಅಧಿಕಾರಿಗಳು ಸಾಮಾನ್ಯವಾಗಿ ಮೂರು ರೀತಿಯಿರುತ್ತಾರೆ: ಅತಿ ಸಕ್ರಿಯ (Overactive), ನಿಷ್ಕ್ರಿಯ (Inactive) ಮತ್ತು ಪೂರ್ವಭಾವಿಯಾಗಿ ಸ್ಪಂದಿಸುವವರು (Proactive). ಅಧಿಕಾರಿಗಳು ಅತಿ ಸಕ್ರಿಯರಾದರೆ ಅದು ನಾಟಕೀಯ ಎನಿಸಿಕೊಳ್ಳುತ್ತದೆ, ನಿಷ್ಕ್ರಿಯರಾದರೆ ನಿರ್ಲಕ್ಷ್ಯ ಎನಿಸುತ್ತದೆ. ಆದರೆ, ಪೂರ್ವಭಾವಿಯಾಗಿ ಸ್ಪಂದಿಸುವ ಅಧಿಕಾರಿಗಳು ಆಡಳಿತಕ್ಕೂ ಹಾಗೂ ಸಮಾಜಕ್ಕೂ ಹೆಚ್ಚು ಪ್ರಯೋಜನಕಾರಿಯಾಗುತ್ತಾರೆ. ಅಂತಹ ಜನಪರ ಅಧಿಕಾರಿಗಳ ಸಾಲಿಗೆ ಎಂ.ಆರ್. ರವಿ ಅವರು ಸೇರುತ್ತಾರೆ. ಇದೇ ಜುಲೈ ಅಂತ್ಯದಲ್ಲಿ ಅವರು ಸೇವೆಯಿಂದ ನಿವೃತ್ತಿಯಾಗುತ್ತಿದ್ದಾರೆ. ಮಾರುಕಟ್ಟೆಯಲ್ಲಿ ಹಣಕೊಟ್ಟರೂ ಸಿಗದಂತಹ ತಮ್ಮ ಅಪರೂಪದ ಅನುಭವಗಳು ಮತ್ತು ಹೋರಾಟದ ಕಥೆಗಳನ್ನು ಅವರು ಈ ಪುಸ್ತಕದ ಮೂಲಕ ಸಮಾಜಕ್ಕೆ ನೀಡಿದ್ದಾರೆ. ಇಂಗ್ಲಿಷ್ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಅವರು, ಇಂಗ್ಲಿಷ್ ಹಾಗೂ ಕನ್ನಡ ಎರಡರಲ್ಲೂ ಪ್ರಾವೀಣ್ಯತೆ ಹೊಂದಿದ್ದು, ತಮ್ಮ ಮುಂದಿನ ನಿವೃತ್ತ ಜೀವನದಲ್ಲಿ ಸ್ವಲ್ಪ ಬಿಡುವು ಮಾಡಿಕೊಂಡು ಇಂತಹ ಇನ್ನಷ್ಟು ಉತ್ತಮ ಕೃತಿಗಳನ್ನು ರಚಿಸಲಿ ಎಂದು ಆಶಿಸುತ್ತೇನೆ.

ಈ ಕೃತಿಯನ್ನು ಮೊದಲ ಭಾಗವೆಂದು ಪರಿಗಣಿಸಿ, ಮುಂದಿನ ದಿನಗಳಲ್ಲಿ ಇದರ ಮುಂದುವರಿದ ಭಾಗಗಳನ್ನು ತರುವ ಅಗತ್ಯವಿದೆ. ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ಜನರ ಬದುಕಿಗೆ ದೊಡ್ಡ ಕೊಡುಗೆ ನೀಡಿದ ಕೆ.ಸಿ. ರೆಡ್ಡಿ, ಪಟ್ಟಾಭಿರಾಮನ್, ಎಂ.ವಿ. ಕೃಷ್ಣಪ್ಪ ಹಾಗೂ ಟಿ. ಚನ್ನಯ್ಯ ಅವರಂತಹ ಮಹಾನ್ ನಾಯಕರ ಹೆಸರುಗಳು ಈ ಕೃತಿಯ ಮುಂದಿನ ಭಾಗಗಳಲ್ಲಿ ದಾಖಲಾಗಬೇಕಿದೆ. ಇವರು ತಮ್ಮ ಇಡೀ ಜೀವನವನ್ನೇ ಸಮಾಜಕ್ಕಾಗಿ ಮುಡಿಪಾಗಿಟ್ಟವರು. ನೀರಾವರಿ ಯೋಜನೆಗಳ ಕುರಿತಾದ ನಮ್ಮ ಇಂದಿನ ಶಾಶ್ವತ ಹೋರಾಟಗಳಿಗೆ ಇವರೇ ಪ್ರೇರಣೆ. ನಮ್ಮ ಕೋಲಾರದ ಪಟ್ಟಾಭಿರಾಮನ್ ಅವರು ಸದಾಕಾಲ ಸ್ಮರಣೀಯರು. ನಾನು ಕೋಲಾರಕ್ಕೆ ಬಂದ ಹೊಸತರಲ್ಲಿ ಇಲ್ಲಿ ಬೆರಳೆಣಿಕೆಯ ಪತ್ರಿಕೆಗಳಿದ್ದವು. ಆದರೆ ಇಂದು 'ಕೋಲಾರ ವಾಣಿ' ಸೇರಿದಂತೆ ಹಲವು ಪತ್ರಿಕೆಗಳು ಪ್ರಕಟವಾಗುತ್ತಿದ್ದು, ಮಾಧ್ಯಮ ಕ್ಷೇತ್ರವೂ ಬಹಳಷ್ಟು ಬೆಳೆದಿದೆ.

ನಮ್ಮ ಹೋರಾಟದ ದಿನಗಳನ್ನು ಮೆಲುಕು ಹಾಕುವುದಾದರೆ, ರೈತ ಹೋರಾಟಗಳಲ್ಲಿ ನಂಜುಂಡಸ್ವಾಮಿ ಅವರ ಪಾತ್ರ ಹಾಗೂ ವೆಂಕಟಗಿರಿಯಪ್ಪನವರ ಜೊತೆಗೂಡಿ ನಾವು ಮಾಡಿದ ಪ್ರತಿಭಟನೆಗಳು ಅವಿಸ್ಮರಣೀಯ. ಕಮ್ಯುನಿಸ್ಟ್ ಪ್ರಭಾವವಿದ್ದ ಈ ಜಿಲ್ಲೆಯಲ್ಲಿ, ದಲಿತ ಮತ್ತು ರೈತ ಹೋರಾಟಗಳು ಸಮಾಜದಲ್ಲಿ ದೊಡ್ಡ ಬದಲಾವಣೆಯನ್ನು ತಂದವು. ಇದು ನಮ್ಮ ವೈಯಕ್ತಿಕ ಜೀವನದ ಬದಲಾವಣೆಗೂ →

ಕಾರಣವಾಯಿತು. ಸಂವಿಧಾನ ಮತ್ತು ಕಾನೂನುಗಳಿದ್ದರೂ, ದಲಿತರ ಮೇಲಿನ ದೌರ್ಜನ್ಯ ಹಾಗೂ ಅಸ್ಪೃಶ್ಯತೆಯಂತಹ ಅಮಾನವೀಯ ಪದ್ಧತಿಗಳು ಇಂದಿಗೂ ಅಲ್ಲಲ್ಲಿ ಜೀವಂತವಾಗಿವೆ. ಅಂತಹ ಅನ್ಯಾಯಗಳ ವಿರುದ್ಧ ಉಚಿತವಾಗಿ ಕಾನೂನು ಹೋರಾಟ ನಡೆಸಿದ ವಕೀಲರ ಸೇವೆ ಮರೆಯಲಾಗದ್ದು.

ಬದಲಾವಣೆ ಎಂಬುದು ಕೇವಲ ಭಾಷಣಗಳಿಂದ ಸಾಧ್ಯವಿಲ್ಲ; ಅದಕ್ಕೆ ಸಂಘಟಿತ ಹೋರಾಟದ ಅಗತ್ಯವಿದೆ. ಈ ನಿಟ್ಟಿನಲ್ಲಿ ಗೀತಮ್ಮ , ಮಮತಾ ರೆಡ್ಡಿ ಅವರಂತಹ ಮಹಿಳೆಯರು ಕೂಡ ಸಕ್ರಿಯವಾಗಿ ಹೋರಾಟದಲ್ಲಿ ತೊಡಗಿಸಿಕೊಂಡು ಸ್ಫೂರ್ತಿಯಾಗಿದ್ದಾರೆ. ಸಂಸತ್ತು, ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗಗಳು ತಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿಭಾಯಿಸಿದಾಗ ಮಾತ್ರ ಪ್ರಜಾಪ್ರಭುತ್ವ ವ್ಯವಸ್ಥೆ ಯಶಸ್ವಿಯಾಗಲು ಮತ್ತು ಇಂತಹ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಾಧ್ಯ. ಅತ್ಯುತ್ತಮ ಸಂಸದೀಯಪಟು ಎನಿಸಿಕೊಂಡಿರುವ ಮಾಧುಸ್ವಾಮಿಯವರಂತಹ ನಾಯಕರು ನಮ್ಮೆಲ್ಲರಿಗೂ ಪ್ರೇರಣೆಯಾಗಿದ್ದಾರೆ.

ಸಾಹಿತ್ಯ, ವಿಜ್ಞಾನ, ಕ್ರೀಡೆ ಸೇರಿದಂತೆ ವಿವಿಧ ಕ್ಷೇತ್ರಗಳ ಸಾಧಕರನ್ನು ಒಳಗೊಂಡಂತೆ ಈ ಪುಸ್ತಕದ ಮುಂದಿನ ಭಾಗಗಳು ಹೊರಬರಲಿ. ನಮ್ಮ ಜಿಲ್ಲೆಯಿಂದ ಸಿ. ಬೈರೇಗೌಡರಂತಹ ನಾಯಕರು, ಅನೇಕ ಐಎಎಸ್ ಅಧಿಕಾರಿಗಳು, ಕ್ರೀಡಾಪಟುಗಳು ಮತ್ತು ವಿಜ್ಞಾನಿಗಳು ಹೊರಹೊಮ್ಮಿದ್ದಾರೆ. ಇವರೆಲ್ಲರ ದಾಖಲೆಗಳು ಕೇವಲ ರಾಜಕಾರಣಕ್ಕೆ ಸೀಮಿತವಾಗದೆ, ಡಿ.ವಿ.ಜಿ. ಅವರಂತಹ ಸಾಹಿತ್ಯ ದಿಗ್ಗಜರನ್ನು ಒಳಗೊಂಡಂತೆ ಸಮಾಜದ ಎಲ್ಲ ಮುಖಗಳನ್ನು ಪ್ರತಿಬಿಂಬಿಸುವಂತಿರಲಿ. ಇಂತಹ ಮಹತ್ತರವಾದ ಕೃತಿಯನ್ನು ಹೊರತಂದಿರುವ ಎಂ.ಆರ್. ರವಿ ಹಾಗೂ ಇದಕ್ಕೆ ಸಹಕರಿಸಿದ ಸಿ. ಬೈರೇಗೌಡರು ಸೇರಿದಂತೆ ಎಲ್ಲರಿಗೂ ನನ್ನ ಹೃತ್ಪೂರ್ವಕ ಅಭಿನಂದನೆಗಳು.



## ´ಮುಂದೆ ನಡೆದವರು´ ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಕೋಲಾರ ಜಿಲ್ಲಾಧಿಕಾರಿ ಡಾ. ಎಂ. ಆರ್. ರವಿ ಅವರ ಮಾತುಗಳು

ಇಂದಿನ ಈ ಕಾರ್ಯಕ್ರಮವು ಒಂದು ರೀತಿ ಅನಿರೀಕ್ಷಿತವಾದ ಫಲಿತಾಂಶವನ್ನು ತಂದುಕೊಡುತ್ತಿದೆ. ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಸನ್ಮಾನ್ಯ ಗೋಪಾಲ್ ಗೌಡರು ಪುಸ್ತಕದಲ್ಲಿರುವ ವಿಚಾರಗಳನ್ನು ಹಾಗೂ ನನ್ನ ಕುರಿತು ಉತ್ತಮ ಮಾತುಗಳನ್ನು ಹಂಚಿಕೊಂಡಿದ್ದಾರೆ. ಅವರ ಮಾತುಗಳಿಗೆ ನಾನು ಎಷ್ಟರ ಮಟ್ಟಿಗೆ ಅರ್ಹನೋ ಅಥವಾ ಯೋಗ್ಯನೋ ನನಗೆ ಈ ಕ್ಷಣದವರೆಗೂ ತಿಳಿದಿಲ್ಲ. ಆದರೂ ನಿಮ್ಮೆಲ್ಲರ ಹೃದಯವಂತಿಕೆಗೆ ನಾನು ಸದಾ ಚಿರಋಣಿಯಾಗಿದ್ದೇನೆ. ಹಿರಿಯರು ಹಾಗೂ ಮಾಜಿ ಸಭಾಧ್ಯಕ್ಷರಾದ ಸನ್ಮಾನ್ಯ ಸುದರ್ಶನ್ ಸಾಹೇಬರು ಮತ್ತು ನರಸಿಂಹಮೂರ್ತಿಯವರು, ಸಾರ್ವಜನಿಕ ಬದುಕಿನಲ್ಲಿ ಆಡಳಿತಗಾರರು ಹೇಗೆ ಕಾರ್ಯನಿರ್ವಹಿಸಿದರೆ ಜನರಿಗೆ ಹತ್ತಿರವಾಗಬಹುದು ಎಂಬುದರ ಕುರಿತು ತಮ್ಮ ಅನುಭವದ ಹಿನ್ನೆಲೆಯಲ್ಲಿ ಸುದೀರ್ಘವಾದ ಅಭಿಪ್ರಾಯಗಳನ್ನು ಕಟ್ಟಿಕೊಟ್ಟಿದ್ದಾರೆ.

ಇನ್ನು ಐದು ದಿನಗಳಲ್ಲಿ ನಾನು ನಿವೃತ್ತನಾಗಲಿದ್ದೇನೆ. ವೃತ್ತಿಯಲ್ಲಿ ನಿರ್ದಿಷ್ಟ ಕಾಲದ ನಂತರ ಪಕ್ಕಕ್ಕೆ ಸರಿಯುವುದು ಸಹಜ ನಿಯಮ; ಅದನ್ನು ಯಾರೂ ಬದಲಾಯಿಸಲು ಸಾಧ್ಯವಿಲ್ಲ. ಆದರೆ, ಪ್ರವೃತ್ತಿ ಎಂಬುದು ಬಹಳ ಮುಖ್ಯವಾದದ್ದು. ಸರ್ಕಾರಿ ನೌಕರಿಗೆ ಸೇರುವ ಮುನ್ನ ನಾನು ಪತ್ರಕರ್ತನಾಗಿದ್ದೆ. ಕೆಲಸ ಸಿಕ್ಕಿತು ಎಂಬ

ಸಂತೋಷದ ಜೊತೆಗೆ, ನನ್ನ ಸೃಜನಶೀಲತೆ ಎಲ್ಲಿ ಸತ್ತುಹೋಗುತ್ತದೋ ಎಂಬ ಆತಂಕದಿಂದ ಅಂದು ನನ್ನ ಕಣ್ಣಲ್ಲಿ ನೀರು ಬಂದಿತ್ತು. ಆದರೆ, ಇಡೀ ಕರ್ನಾಟಕ ದರ್ಶನ ಮಾಡಿಸಿ, ನನಗೆ ಎಲ್ಲಾ ರೀತಿಯ ಸೌಕರ್ಯ, ಅಧಿಕಾರ ಮತ್ತು ಅವಕಾಶಗಳನ್ನು ನೀಡಿದ ಕರ್ನಾಟಕ ಸರ್ಕಾರಕ್ಕೆ ಹಾಗೂ ಬೆಂಬಲವಾಗಿ ನಿಂತ ನನ್ನ ಕುಟುಂಬಕ್ಕೆ ನಾನು ಸದಾ ಆಭಾರಿಯಾಗಿದ್ದೇನೆ. 'ಗುಡ್ ಪೋಸ್ಟಿಂಗ್' ಮತ್ತು 'ಬ್ಯಾಡ್ ಪೋಸ್ಟಿಂಗ್' ಎಂಬ ಭೇದವಿಲ್ಲದೆ, ನೀಡಿದ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ನಿಭಾಯಿಸಿದ್ದೇನೆ.

ನಾಲ್ಕೈದು ವರ್ಷಗಳ ಕಾಲ ನಾನು ನಾನ್-ಎಕ್ಸಿಕ್ಯೂಟಿವ್ ಆಗಿದ್ದಾಗ, ನಿಲ್ಲಿಸಿದ್ದ ಬರವಣಿಗೆಯನ್ನು ಮತ್ತೆ ಶುರು ಮಾಡಿದೆ. ಅದರ ಪ್ರತಿಫಲವಾಗಿ ಸುಮಾರು ೧೦-೧೨ ಪುಸ್ತಕಗಳನ್ನು ಹೊರತರಲು ಸಾಧ್ಯವಾಯಿತು. ಒಬ್ಬ ಅಧಿಕಾರಿಗಿಂತಲೂ ಮಿಗಿಲಾಗಿ, ಜನಸಾಮಾನ್ಯರು ನನ್ನನ್ನು 'ಬರಹಗಾರ' ಎಂಬ ಪ್ರೀತಿಯಿಂದ ಅಪ್ಪಿಕೊಂಡಿದ್ದಾರೆ. ಬರಹಕ್ಕೆ ಅಂತಹ ಅದ್ಭುತ ಶಕ್ತಿಯಿದೆ. ಅದು ಸಾರ್ವಜನಿಕರ ಬದುಕಿಗೆ ನೇರವಾಗಿ ತಟ್ಟಿ , ಹೃದಯವನ್ನು ಸ್ಪರ್ಶಿಸುವ ಸಾಮರ್ಥ್ಯವನ್ನು ಹೊಂದಿದೆ. ಅಧ್ಯಯನ ಮತ್ತು ಬರವಣಿಗೆಯನ್ನು ಯಾರು ತಮ್ಮ ಜೊತೆಯಾಗಿಸಿಕೊಳ್ಳುತ್ತಾರೋ ಅವರು ಪರಿಪೂರ್ಣ ವ್ಯಕ್ತಿಯಾಗಲು ಸಾಧ್ಯವಿದೆ. ೭೫ನೇ ವರ್ಷದ ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುತ್ತಿರುವ ಶಾಂತಮ್ಮನವರಿಗೂ ಈ ಸಂದರ್ಭದಲ್ಲಿ ನನ್ನ ಶುಭಾಶಯಗಳು. ಅವರು ತಮ್ಮ ಬದುಕಿನ ವೃತ್ತಾಂತವನ್ನು ಛಲದಿಂದ ಪುಟಗಳ ಮೂಲಕ ಕಟ್ಟಿಕೊಟ್ಟಿದ್ದಾರೆ. ಬದುಕನ್ನು ನಾವು ಹೇಗೆ ಸ್ವೀಕರಿಸುತ್ತೇವೆ ಹಾಗೂ ಅದನ್ನು ಹೇಗೆ ದಾಖಲೀಕರಣ ಮಾಡುತ್ತೇವೆ ಎನ್ನುವುದು ಬಹಳ ಮುಖ್ಯ.

ಹಿರಿಯರಾದ ಸಿ. ಮುನಿಯಪ್ಪನವರು ಕೂಡ ತಮ್ಮ ಪುಸ್ತಕವನ್ನು ಬಿಡುಗಡೆ ಮಾಡಿದ್ದಾರೆ. ಕಾಲಡಿಯ ಕಣ್ಣಿನಿಂದ ಒಳನೋಟವನ್ನು ಇಟ್ಟು ಓದಿದಾಗ ಮಾತ್ರ ಪುಸ್ತಕದ ಅಕ್ಷರಗಳಿಗೆ ಜೀವ ಬರುತ್ತದೆ. ಒಳಗಣ್ಣು ಮತ್ತು ಸಂವೇದನೆ ಇಲ್ಲದೆ ಹೋದರೆ ಕೇವಲ ಅಕ್ಷರಗಳು ಅರ್ಥವಾಗುವುದಿಲ್ಲ. ದಾವತಿ ಓದಿದಾಗಲೂ ನನಗೆ ಇದೇ ರೀತಿಯ ಅನುಭವವಾಯಿತು. ಸಮಾಜದ ಅಮಾನವೀಯ ವ್ಯವಸ್ಥೆಯ ನಡುವೆಯೂ ನಾವು ಮನುಷ್ಯರಾಗಿ ಬದುಕಿದ್ದೀವಾ ಎಂಬ ಪ್ರಶ್ನೆಯನ್ನು ಹುಟ್ಟುಹಾಕುವ ಚಿತ್ರಣವನ್ನು ಆ ಪುಸ್ತಕ ಕಟ್ಟಿಕೊಡುತ್ತದೆ.

'ನಮ್ಮ ಮುಂದೆ ನಡೆದವರು' ಎನ್ನುವ ಅತ್ಯದ್ಭುತ ಶೀರ್ಷಿಕೆಯನ್ನು ಪುಸ್ತಕಕ್ಕೆ ನೀಡಿದ ಶಿವಪ್ಪನವರಿಗೂ ನನ್ನ ಧನ್ಯವಾದಗಳು. ಯಾವುದೇ ಉತ್ಪ್ರೇಕ್ಷೆಗಳಿಲ್ಲದೆ, ಅತ್ಯಂತ ಸರಳವಾದ ಮಾತಿನಲ್ಲಿ ಬದುಕಿನ ದೊಡ್ಡ ಸತ್ಯಗಳನ್ನು ಹೇಳುವುದು ಕೆಲವರಿಗೆ ಮಾತ್ರ ಒಲಿಯುತ್ತದೆ. ಬುದ್ಧ , ಬಸವಣ್ಣನವರ ವಚನಗಳಂತೆ ಸರಳವಾಗಿ, ನೈಜವಾಗಿ ಹಾಗೂ ಸಹಜವಾಗಿ ಬರೆಯುವುದು ನಿಜವಾದ ಸಾಹಿತ್ಯ. ಆಡಂಬರದಿಂದ ಬರೆಯುವುದು ಸಾಹಿತ್ಯವಾಗಬಾರದು. ನಾವು ಯಾವ ನಿರೀಕ್ಷೆಗಳಿಲ್ಲದೆ ದೀಪದಂತೆ ಉರಿಯುತ್ತಾ, ಬೆಳಕು ನೀಡುವ ಕೆಲಸ ಮಾಡಬೇಕು; ಅದೇ ನಮ್ಮೆಲ್ಲರ ಬದುಕಾಗಬೇಕು.

ನಾನು ಸರ್ಕಾರಿ ಉದ್ಯೋಗವನ್ನು ಇದೇ ಕೋಲಾರ ಜಿಲ್ಲೆಯಲ್ಲಿ ಪ್ರಾರಂಭಿಸಿದೆ. ೩೩ ವರ್ಷಗಳ ಹಿಂದೆ ಕಾಲೇಜು ಮೇಷ್ಟ್ರಾಗಿ ಕೆಲಸ ಶುರುಮಾಡಿದ್ದೆ. ಈಗ ಇದೇ ಜಿಲ್ಲೆಗೆ ಜಿಲ್ಲಾಧಿಕಾರಿಯಾಗಿ ಬಂದಾಗ, ಇದು ನನ್ನ ಕೊನೆಯ ಅವಕಾಶವೆಂದು ನನಗೆ ತಿಳಿದಿರಲಿಲ್ಲ. ಯಾವ ಜಿಲ್ಲೆಯಲ್ಲಿ ಸೇವೆಯನ್ನು ಆರಂಭಿಸಿದೆನೋ, ಅದೇ ಜಿಲ್ಲೆಯಲ್ಲಿ ಸೇವೆಯನ್ನು ಪೂರ್ಣಗೊಳಿಸುವ ಅವಕಾಶ ನನಗೆ ಸಿಕ್ಕಿರುವುದು ಕಾಕತಾಳೀಯವಾದರೂ ನನಗೆ ಅತೀವ ಸಂತಸ ತಂದಿದೆ. ಕೋಲಾರದ ಜನತೆ ನನ್ನನ್ನು ಅತ್ಯಂತ ಪ್ರೀತಿಯಿಂದ ಕಂಡಿದ್ದಾರೆ. ಎರಡು ಬಾರಿ ನನಗೆ ಅನ್ನ ಹಾಕಿದ ಈ ನೆಲದ ಋಣವನ್ನು ತೀರಿಸಲು ಸಾಧ್ಯವಿಲ್ಲ. ನನ್ನನ್ನು ತಮ್ಮವನನ್ನಾಗಿ ಸ್ವೀಕರಿಸಿದ 'ಅರಿವು ಭಾರತ' ತಂಡ, ಮೈಸೂರಿನಿಂದ ಬಂದ ಸ್ನೇಹಿತರು ಹಾಗೂ ಸಮಸ್ತ ಜನತೆಗೆ ನನ್ನ ಸಾಷ್ಟಾಂಗ ನಮಸ್ಕಾರಗಳು.

ಒಬ್ಬ ಅಧಿಕಾರಿಯಾಗಿ ಎಲ್ಲರನ್ನು ಒಪ್ಪಿಸಿಕೊಳ್ಳುವುದು ಕಷ್ಟ. ಆದರೆ, ಸತ್ಯ ಮತ್ತು ಧರ್ಮದ ಮಾರ್ಗದಲ್ಲಿ ನಾವು ನಡೆಯಬೇಕು. ಕಷ್ಟಗಳು ಬಂದಾಗ ಅವು ಒಳ್ಳೆಯವರನ್ನೇ ಹುಡುಕಿಕೊಂಡು ಬರುತ್ತವೆ. ಹಣ್ಣು ಬಿಟ್ಟ ಮರಕ್ಕೆ ಕಲ್ಲು ಹೊಡೆಯುವುದು ಸಮಾಜದ ಸಹಜ ಗುಣ. ಈ ಜಿಲ್ಲೆಯಲ್ಲಿ 'ಅರಿವು ಭಾರತ' ಸಮಾಜದ ನೊಂದವರೊಂದಿಗೆ, ಅವಮಾನಿತರೊಂದಿಗೆ ನನ್ನನ್ನು ಸಮೀಕರಣ ಮಾಡಿಕೊಂಡು ಮನುಷ್ಯನಾಗಿ

→

ಬದುಕಲು ಅವಕಾಶ ಮಾಡಿಕೊಟ್ಟಿದೆ. ಮನುಷ್ಯತ್ವವನ್ನು ಜಾಗೃತಗೊಳಿಸುವ ಇಂತಹ ಕೆಲಸ ಕೋಲಾರ ಜಿಲ್ಲೆಯಲ್ಲಿ ಅರಿವು ಭಾರತ ತಂಡದಿಂದ ಮಾತ್ರ ಸಾಧ್ಯ.

ಹೋರಾಟ ಮಾಡುವುದು ಸುಲಭವಲ್ಲ, ಆ ಹೋರಾಟದಲ್ಲಿ ಎಲ್ಲವನ್ನೂ ಜಯಿಸುವುದು ಕೂಡ ಸತ್ಯವಲ್ಲ. ಆದರೆ ಒಳಗಡೆ ಇರುವ ನೈತಿಕ ಧೈರ್ಯ ಮಾತ್ರ ನಮ್ಮನ್ನು ಸರಿದಾರಿಗೆ ಕೊಂಡೊಯ್ಯುತ್ತದೆ. ಸಮಾಜಕ್ಕೆ ನಮ್ಮಿಂದ ಸಾಧ್ಯವಾದ ಹೆಜ್ಜೆಗುರುತುಗಳನ್ನು ಬಿಟ್ಟು ಹೋಗಬೇಕು. ಒಂದು ಸಣ್ಣ ಹೆಜ್ಜೆ ಇಟ್ಟರೆ ಅದು ಸಾವಿರ ಮೈಲುಗಳ ಪಯಣದ ಆರಂಭವಾಗುತ್ತದೆ. ಅಮೇರಿಕಾದ ಕವಿ ರಾಬರ್ಟ್ ಫ್ರಾಸ್ಟ್ ತಮ್ಮ 'ರೋಡ್ ನಾಟ್ ಟೇಕನ್' ಕವಿತೆಯಲ್ಲಿ ಹೇಳುವಂತೆ, ಹೆಚ್ಚು ಜನ ಪ್ರಯಾಣಿಸದ ರಸ್ತೆಯನ್ನು ಆರಿಸಿಕೊಂಡಾಗ ಭವಿಷ್ಯದ ದಿಕ್ಕೇ ಬದಲಾಗುತ್ತದೆ. ಅಂತಹ ದೃಢವಾದ ನಿರ್ಧಾರಗಳನ್ನು ನಾವು ತೆಗೆದುಕೊಳ್ಳಬೇಕು. ಸಮಾಜದ ಬಗ್ಗೆ ಕಳಕಳಿ ಹಾಗೂ ಏನಾದರೂ ಸಾಧಿಸುವ ಕಿಚ್ಚು ನಮ್ಮಲ್ಲಿರಬೇಕು. ನನ್ನ ಕೊನೆಯ ದಿನಗಳನ್ನು ಇಷ್ಟು ಅರ್ಥಪೂರ್ಣವಾಗಿ, ಸಾರ್ಥಕವಾಗಿ ಕಳೆಯಲು ಕಾರಣರಾದ ನಿಮ್ಮೆಲ್ಲರ ನಿಷ್ಕಲ್ಮಶ ಪ್ರೀತಿ ಹಾಗೂ ಸಹಕಾರಕ್ಕೆ ನನ್ನ ಅನಂತ ಧನ್ಯವಾದಗಳು.

# ಮುಂದೆ ನಡೆದವರು



ಅರಿವು ಭಾರತ

Arivu Bharat
1st Cross, 1111st Main Road,
Muneshwara Nagar
Kolar – 563101
Ph: 9448663904, 9449652631
www.arivubharat.com